بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّی عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 01

ಸಂಚಿಕೆ: 13

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

09 ಏಪ್ರಿಲ್ 2020, 09 ಶಹಾದತ್ 1399 ಹಿಜರಿ ಶಮ್‌ಸಿ,
15 ಶಾಬಾನ್ 1441 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدۡ اِمَامَنَا بِرُوۡحِ الۡقُدُسِ وَبَارِکۡ لَنَا فِیۡ عُمُرِہٖ وَاَمۡرِہٖ۔

## ಅಲ್ಲಾಹನ ಉಪದೇಶ

اِنَّ فِیۡ خَلۡقِ السَّمٰوٰتِ وَالۡاَرۡضِ وَاخۡتِلَافِ الَّیۡلِ وَالنَّہَارِ لَاٰیٰتٍ لِّاُولِی الۡاَلۡبَابِ۝

*(ಆಲಿ ಇಮ್ರಾನ್ 191)*

ಅಂದರೆ: ಆಕಾಶಗಳ ಮತ್ತು ಭೂಮಿಯ ಸೃಷ್ಟಿಯಲ್ಲೂ ರಾತ್ರಿ - ಹಗಲು ರೂಪಾಂತರದಲ್ಲೂ ದಿಟವಾಗಿಯೂ ಬುದ್ಧಿಶಾಲಿಗಳಿಗೆ (ಹಲವು) ದೃಷ್ಟಾಂತಗಳಿವೆ.

**ಯಾವಾಗ ಒಬ್ಬ ವ್ಯಕ್ತಿ ಒಂದು ಸಂಘಟನೆಯಲ್ಲಿ ಸೇರಿಕೊಳ್ಳುತ್ತಾನೋ ಮತ್ತು ಆ ಸಂಘಟನೆಯ ವೈಭವ ಹಾಗೂ ಗೌರವವನ್ನು ಲೆಕ್ಕಿಸದೆ ಅದರ ವಿರುದ್ಧ ನಡೆದುಕೊಳ್ಳುವವನಾದರೆ ಅವನು ಅಲ್ಲಾಹನ ಅವಕೃಪೆಗೆ ಗುರಿಯಾಗುತ್ತಾನೆ.**

### ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಯಾವ ವ್ಯಕ್ತಿ ತಮ್ಮ ನೆರೆಹೊರೆಯವರ ಮುಂದೆ ತನ್ನ ನೈತಿಕ ಪರಿವರ್ತನೆ ತೋರಿಸುತ್ತಾನೋ. ನಾನು ಮೊದಲು ಏನಾಗಿದ್ದೆ ಮತ್ತು ಇಂದು ಹೇಗಿದ್ದೇನೆಂದು, ಅವನು ಒಬ್ಬ ಪವಾಡ ಪುರುಷನೇ ಸರಿ. ನೆರೆಹೊರೆಯವರ ಮೇಲೆ ಅವನ ನಡತೆ ಉತ್ತಮ ಪ್ರಭಾವ ಬೀರಿರುತ್ತದೆ. ನಮ್ಮ ಜಮಾಅತ್ತಿನ ಮೇಲೆ ಆಕ್ಷೇಪ ಎಸಗುತ್ತಾರೆ. ಏನು ಪ್ರಗತಿಯಾಗಿದೆ ಮತ್ತು ಏಕೆ ಆರೋಪ ಮಾಡುತ್ತಾರೆ. ಸುಳ್ಳುಗಳು ಪ್ರಕೋಪಕ್ಕೆ ದೂಡುತ್ತವೆ. ಈ ಸಂಘಟನೆ ಉತ್ತಮವೆಂದು ಭಾವಿಸಿ ಸೇರ್ಪಡೆಗೊಂಡ ಮನುಷ್ಯನು ತನ್ನ ತಂದೆಯ ಗೌರವವನ್ನು ಪ್ರತಿನಿಧಿಸುವ ಪುತ್ರನಂತಾಗಿರುತ್ತಾನೆ. ಏಕೆಂದರೆ ಬೈಅತ್ ಮಾಡುವವನು ಸಂತಾನದ ಆದೇಶ ಹೊಂದಿರುತ್ತಾನೆ. ಆದುದರಿಂದ ಹಝ್‌ರತ್ ರಸೂಲುಲ್ಲಾಹ್[ಸ] ರವರ ಧರ್ಮಪತ್ನಿಯರನ್ನು **"ಉಮ್ಮಹಾತುಲ್ ಮುಮಿನೀನ್"** (ಸತ್ಯ ವಿಶ್ವಾಸಿಗಳ ಮಾತೆಯರು) ಎಂದು ಕರೆಯಲಾಗಿದೆ. ಅಂದರೆ ಹುಝೂರ್[ಸ] ಎಲ್ಲ ವಿಶ್ವಾಸಿಗರಿಗೆ ಪಿತ ಎನ್ನುವಂತಾಯಿತು. ದೈಹಿಕ ನೆಲೆಯ ಪಿತನು ಈ ಭೂಮಿಯಲ್ಲಿ ಜನ್ಮ ನೀಡಲು ಕಾರಣನಾಗುತ್ತಾನೆ. ಮತ್ತು ಇಹ ಜೀವನಕ್ಕೆ ಕಾರಣಕರ್ತ. ಆದರೆ ನಿಮ್ಮಲ್ಲಿ ಯಾರಾದರೂ ನಿಮ್ಮ ಪಿತನನ್ನು ಅವಮಾನಿಸಲು ಇಷ್ಟಪಡುವರೇ? ವೇಶ್ಯೆಯರ ಬಳಿ ಹೋಗಲಿ, ಜೂಜು ಆಡಲಿ, ತನ್ನ ಪಿತನಿಗೆ ಕೆಟ್ಟ ಹೆಸರು ತರಬಯಸುವನೆ, ನಾನು ಬಲ್ಲೆನು ಯಾವ ಮನುಷ್ಯನು ಹೀಗೆ ಮಾಡಲು ಸಾಧ್ಯವಿಲ್ಲ. ಇಂತಹ ದುಷ್ಕೃತ್ಯಗಳನ್ನು ಇಷ್ಟಪಡುವುದಿಲ್ಲ. ಅದರೆ ಧೌರ್ಭಾಗ್ಯವಶಾತ್ ಯಾವೊಬ್ಬ ಪುತ್ರನು ಹೀಗೆ ಮಾಡುವುದಾದರೆ ಜನರ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ. ಜನರು ಅವನ ಪಿತನ ಕಡೆ ಬೊಟ್ಟು ಮಾಡಿ ಹೇಳುವರು. ಎಂತಹ ಒಳ್ಳೆಯ ಪಿತನೊಬ್ಬನ ಪುತ್ರನು ಎಂತಹ ಕೆಟ್ಟ ಕೆಲಸವನ್ನು ಮಾಡುತ್ತಿದ್ದಾನೆ. ಹೀಗೆ ಆ ದೌರ್ಭಾಗ್ಯವಂತ ಪುತ್ರನು ತನ್ನ ಪಿತನ ಹೆಸರಿಗೆ ಕಳಂಕ ಹಚ್ಚುವವನಾಗುತ್ತಾನೆ. ಅದೇ ರೀತಿ ಯಾವಾಗ ಒಬ್ಬ ವ್ಯಕ್ತಿ ಒಂದು ಸಂಘಟನೆಯಲ್ಲಿ ಸೇರಿಕೊಳ್ಳುತ್ತಾನೋ ಮತ್ತು ಆ ಸಂಘಟನೆಯ ವೈಭವ ಹಾಗೂ ಗೌರವವನ್ನು ಲೆಕ್ಕಿಸದೇ ಅದರ ವಿರುದ್ಧ ನಡೆದುಕೊಳ್ಳುವನಾದರೆ ಅವನು ಅಲ್ಲಾಹನ ಅವಕೃಪೆಗೆ ಗುರಿಯಾಗುತ್ತಾನೆ. ಏಕೆಂದರೆ ಅವನು ಕೇವಲ ತನ್ನ ನಾಶಕ್ಕೆ ಕಾರಣನಾಗುವುದು ಮಾತ್ರವಲ್ಲ ಇತರರನ್ನು ಒಂದು ಕೆಟ್ಟ ಮಾದರಿಯಾಗಿ ಅವರನ್ನು ಸಹ ಅನುಗ್ರಹ ಹಾಗೂ ಸನ್ಮಾರ್ಗದಿಂದ ವಂಚಿತರನ್ನಾಗಿ ಮಾಡಲು ಕಾರಣನಾಗುತ್ತಾನೆ. ಆದ್ದರಿಂದ ನೀವು ಪೂರ್ಣ ಸಾಮರ್ಥ್ಯದಿಂದ ಅಲ್ಲಾಹ ಸಹಕಾರ ಬಯಸಿ ಮತ್ತು ಪೂರ್ಣಶಕ್ತಿ ಹಾಗೂ ಶೌರ್ಯದಿಂದ ತನ್ನ ನ್ಯೂನತೆಯನ್ನು ದೂರ ಮಾಡಲು ಪ್ರಯತ್ನ ಪಡಿರಿ. ಎಲ್ಲಿ ವಿವಶತೆ ಕಾಣುವರೋ ಅಲ್ಲಿ ಆತ್ಮೀಯವಾಗಿ ಹಾಗೂ ದೃಢ ನಿಶ್ಚಯದೊಂದಿಗೆ ಪಾರ್ಥಿಸಿರಿ. ಏಕೆಂದರೆ ಆತ್ಮೀಯವಾಗಿ ಹಾಗೂ ದೃಢತೆಯಿಂದ ಪ್ರಾರ್ಥನೆಗೆ ಎತ್ತಿದ ಕೈಗಳು ಎಂದೂ ಖಾಲಿಯಾಗುವುದಿಲ್ಲ. ನಾವು ಅನುಭವದಿಂದ ಹೇಳಬಲ್ಲೆವು. ನಮ್ಮ ಸಾವಿರಾರು ಪ್ರಾರ್ಥನೆಗಳು ಸ್ವೀಕೃತಗೊಂಡಿವೆ ಮತ್ತು ಸ್ವೀಕೃತವಾಗುತ್ತಿವೆ.

**(ಮಲ್ಫುಝಾತ್ ಸಂಪುಟ-1, ಪುಟ-126, ಮುದ್ರಣ 2018 ಖಾದಿಯಾನ್)**

### ವಿಶೇಶ ಸೂಚನೆ:

**ಹುಝೂರ್[ಅಬಿಅ] ರವರು ನಿಮ್ಮೆಲ್ಲರ ಪತ್ರಗಳನ್ನು ನೋಡಿ ನಿಮಗೋಸ್ಕರ ದುಆ ಮಾಡುತ್ತಿದ್ದಾರೆ.**

ಹುಝೂರ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಅವರ ಬಳಿ ದುಆ ಕೊರಲು ಪತ್ರಗಳನ್ನು ಬರೆಯುವವರ ಗಮನಕ್ಕೆ ತಿಳಿಸುವುದೇನೆಂದರೆ:

ನಿಮ್ಮೆಲ್ಲರ ಪತ್ರಗಳನ್ನು ಹುಝೂರ್ ಅನ್ವರ್‌ರವರ ಸನ್ನಿಧಿಯಲ್ಲಿ ಸಾಮಾನ್ಯ ರೀತಿಯಲ್ಲಿ ಪ್ರಸ್ತುತ ಪಡಿಸಲಾಗುತ್ತಿದೆ. ಆದರೆ, ಕರೋನ ವೈರಸ್ ಸಾಂಕ್ರಮಿಕ ರೋಗ ಚಾಲ್ತಿಯಲ್ಲಿರುವ ಕಾರಣ, ಪತ್ರಗಳಿಗೆ ಉತ್ತರ ನೀಡುವ ಸಂಖ್ಯೆ ಸಾಮಾನ್ಯವಾಗಿ ಕಡಿಮೆ ಮಾಡಲಾಗಿದೆ. ಆದ್ದರಿಂದ ಪ್ರತಿಯೊಂದು ಪತ್ರಗಳಿಗೆ ಪ್ರತ್ಯೇಕವಾಗಿ ಉತ್ತರಿಸಲು ಸಾಧ್ಯವಿಲ್ಲ. ಹುಝೂರ್[ಅಬಿಅ] ರವರು ನಿಮ್ಮೆಲ್ಲರ ಪತ್ರಗಳನ್ನು ನೋಡಿ ನಿಮಗೋಸ್ಕರ ದುಆ ಮಾಡುತ್ತಿದ್ದಾರೆ. ಅಲ್ಲಾಹನು ಎಲ್ಲರಿಗೂ ಕರುಣಿಸಲಿ ಮತ್ತು ದಯಪಾಲಿಸಲಿ. ಈ ಸಾಂಕ್ರಮಿಕ ರೋಗದಿಂದ ಹಾಗೂ ಇನ್ನಿತರ ತೊಂದರೆಗಳಿಂದ ಪ್ರತಿಯೊಬ್ಬರನ್ನು ಸಂರಕ್ಷಿಸಲಿ ಮತ್ತು ಸದಾ ನಿಮ್ಮ ಮೇಲೆ ಅವನ ಪ್ರೀತಿಯ ದೃಷ್ಟಿ ಇರಲಿ. **ಆಮೀನ್.**

**(ಮುನೀರ್ ಅಹ್ಮದ್ ಜಾವೇದ್, ಪ್ರೈವೇಟ್ ಸೆಕ್ರೇಟರಿ)**

**ಸದಾ ನೆನಪಿಡಿರಿ! ಪ್ರತಿ ಅಹ್ಮದಿಯರ ಮುಖವಾಡದ ಹಿಂದೆ ಅಹ್ಮದಿಯತ್ತಿನ ಮುಖವಾಡವಿದೆ. ಹಝ್ರತ್ ಮಸೀಹ್ ಮೌಊದ್(ಅ) ರವರ ಮುಖವಾಡವಿದೆ ಮತ್ತು ಇಸ್ಲಾಮಿನ ಗೌರವವಿದೆ.**

---

## 50ನೇ ಜಲ್ಸಾ ಸಾಲಾನ ತನ್‌ಝಾನಿಯಾ ದಿನಾಂಕ 27 ರಿಂದ 29 ಸೆಪ್ಟೆಂಬರ್ 2019 ಸಂದರ್ಭದಲ್ಲಿ ಸಯ್ಯದುನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅಬಿಅ) ರವರ ವಿಶೇಷ ಸಂದೇಶ

بسم اللہ الرحمٰن الرحیم

نحمدہ ونصلی علی رسولہ الکریم وعلی عبدہ المسیح الموعود

خدا کے فضل اور رحم کے ساتھ

ھو الناصر

**ಪ್ರೀತಿಯ ತನ್‌ಝಾನಿಯಾ ಜಮಾಅತ್ ಬಾಂಧವರೇ!**

**ಅಸ್ಸಲಾಮು ಅಲೈಕುಮ್ ರಹ್ಮತುಲ್ಲಾಹಿ ವ ಬರಕಾತುಹೂ** السلام علیکم ورحمۃ اللہ وبرکاتہ

ನೀವು 27, 28 ಮತ್ತು 29 ಸೆಪ್ಟೆಂಬರ್ 2019 ರಂದು ಜಲ್ಸಾ ಸಾಲಾನ ಹಮ್ಮಿಕೊಂಡಿದ್ದೀರಿ ಎಂದು ತಿಳಿದು ತುಂಬ ಸಂತೋಷವಾಯಿತು. ಅಲ್ಲಾಹನು ನಿಮ್ಮ ಈ ಜಲ್ಸಾವನ್ನು ಮಹೋನ್ನತ ಯಶಸ್ಸುಗಳಿಂದ ಅನುಗ್ರಹಿಸಲಿ, ಅದರಲ್ಲಿ ಭಾಗವಹಿಸಿದವರೆಲ್ಲರೂ ಅದರ ಅನುಗ್ರಹದ ಫಲ ಪಡೆಯುವಂತಾಗಲಿ ಮತ್ತು ನೀವೆಲ್ಲರೂ ಸತ್ಕರ್ಮಗಳಲ್ಲಿ, ನಿಷ್ಠೆಯಲ್ಲಿ ಹಾಗೂ ಭಯಭಕ್ತಿಯಲ್ಲಿ ಪ್ರಗತಿ ಹೊಂದುವವರಾಗಲಿ. ಆಮೀನ್.

ಹಝ್ರತ್ ಮಸೀಹ್ ಮೌಊದ್(ಅ) ರವರ ಬೈಅತ್‌ನಲ್ಲಿ ಸೇರ್ಪಡೆಗೊಂಡ ನಂತರ ಅಲ್ಲಾಹನು ನಮಗೆ ನೀಡಿದ ಅನುಗ್ರಹಗಳು ಮತ್ತು ಔದಾರ್ಯಗಳಲ್ಲಿ ಒಂದು ಅತಿ ದೊಡ್ಡ ಅನುಗ್ರಹವು ಈ ಸಮಾವೇಶ (ಇಜ್ತಿಮಾ) ಆಗಿದೆ ಅದನ್ನು ನಾವು ಜಲ್ಸಾ ಸಾಲಾನ ಎಂದು ಹೆಸರಿಸಿದ್ದೇವೆ. ಈ ಸಮಾವೇಶದಿಂದ ನಮಗೆ ನಮ್ಮ ಆಧ್ಯಾತ್ಮಿಕ ಹಾಗೂ ನೈತಿಕ ಮಟ್ಟ ಉನ್ನತೀಕರಿಸಲು ತಮ್ಮ ಹೃದಯಗಳನ್ನು ಶುದ್ಧಗೊಳಿಸಲು, ತಮ್ಮ ಜ್ಞಾನ ವೃದ್ಧಿಸಲು ಹಾಗೂ ಅಲ್ಲಾಹನ ಹಕ್ಕುಗಳನ್ನು ಮತ್ತು ಅವನ ಸೃಷ್ಟಿಗಳ ಹಕ್ಕುಗಳನ್ನು ಪಾಲಿಸುವ ವಿಶಿಷ್ಠ ಸಂದರ್ಭ ಒದಗಿ ಬರುತ್ತದೆ. ಆದ್ದರಿಂದ ನಮ್ಮ ಭಯಭಕ್ತಿಯಲ್ಲಿ ಉತ್ತೇಜನ ದೊರೆಯುವಂತಾಗುತ್ತದೆ.

ಈ ಮೂರು ದಿನಗಳ ನಡುವೆ ನಮಗೆ ಇಹಲೋಕದ ಪ್ರೀತಿಯನ್ನು ತ್ಯಜಿಸಿ ಅಲ್ಲಾಹನ ಮತ್ತು ಅವನ ಸಂದೇಶವಾಹಕ ರಸೂಲುಲ್ಲಾಹ್(ಸ) ರವರ ಪ್ರೀತಿಗೆ ಮಹತ್ವ ನೀಡಬೇಕಾಗಿದೆ. ಹಾಗೆಯೇ ತನ್ನ ಸೃಷ್ಟಿಕರ್ತರನ್ನು ಪಡೆಯಲು ಪ್ರಯತ್ನಪಡಬೇಕಾಗಿದೆ. ಆದುದರಿಂದ ಈ ಜಲ್ಸದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ವ್ಯಕ್ತಿ ಪುರುಷನಾಗಲಿ, ಸ್ತ್ರೀಯಾಗಲಿ ಈ ಮಾತನ್ನು ಮನವರಿಕೆ ಮಾಡಿಕೊಳ್ಳಲಿ. ಈ ಜಲ್ಸದ ಉದ್ದೇಶವು ಅಲ್ಲಾಹನ ಸಾನಿಧ್ಯ ಪಡೆಯುವುದಾಗಿದೆ. ಇದುವೇ ನಿಮ್ಮೆಲ್ಲರ ಧ್ಯೇಯವಾಗಿರಲಿ. ನೀವು ಈ ಜಲ್ಸದಲ್ಲಿ ಭಾಗವಹಿಸಿ ತಖ್ವದಲ್ಲಿ (ಭಯಭಕ್ತಿ) ಉನ್ನತಿ ಸಾಧಿಸುವವರಾಗಿರಿ ಮತ್ತು ಉನ್ನತ ನೀತಿ ನಡವಳಿಕೆ ಕೋರುತ್ತ ಇತರರ ಹಕ್ಕುಗಳನ್ನು ನೀಡುವವರಾಗಿರಿ. ಈ ಭಾವನೆಯಿಲ್ಲದಿದ್ದರೆ ನಿಮ್ಮ ಈ ಜಲ್ಸದ ಭಾಗವಹಿಸುವಿಕೆ ನಿರರ್ಥಕವಾಗುತ್ತದೆ.

ಅಲ್ಲಾಹನು ತನ್ನ ಅಪಾರವಾದ ಅನುಗ್ರಹ ಹಾಗೂ ಔದಾರ್ಯದಿಂದ ಅಹ್ಮದಿಯರಿಗೆ ಒಳ್ಳೆಯ ವ್ಯವಹಾರ ತೋರಿಸುವ ಹಾಗೂ ಸತ್ಕರ್ಮಗಳನ್ನು ಕೈಗೊಳ್ಳುವ ಸಲುವಾಗಿ ಲೋಕದಲ್ಲೆಡೆ ತಮ್ಮ ಈ ಜಲ್ಸಗಳು ನಡೆಯುತ್ತಿರುತ್ತವೆ. ಈ ಮೂಲಕ ಒಂದು ವಿಶೇಷ ರೀತಿಯ ಆಧ್ಯಾತ್ಮಿಕ ವಾತಾವರಣ ಸೃಷ್ಟಿಸಲಾಗುತ್ತದೆ. ಏಕೆಂದರೆ ಆ ಮೂಲಕ ನಾವು ಅಲ್ಲಾಹನ ಸಂತೃಪ್ತಿ ಪಡೆಯಬಹುದಾಗಿದೆ. ಈ ಉದ್ದೇಶವನ್ನು ಸಾಧಿಸಲು ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

"ನೆನಪಿಡಿರಿ. ಅಲ್ಲಾಹನ ನಿಷ್ಠಾವಂತ ದಾಸರ ಕುರಿತು ಅಲ್ಲಾಹನು ಸ್ವಯಂ ಹೀಗೆ ನುಡಿದನು. ಲಾ ತುಲ್‌ಹೀಹಿಮ್ ತಿಜಾರತುನ್ ವಲಾ ಬೈಬನ್ ಅಲ್ ಝಿಕರಿಲ್ಲಾಹಿ" (ಅನ್ನೂರ್–38). ವ್ಯಾಪಾರ ವ್ಯವಹಾರಗಳಾಗಲಿ, ಕೊಡುಕೊಳ್ಳುವುದಾಗಲಿ, ಅವರನ್ನು ಅಲ್ಲಾಹನ ಸ್ಮರಣೆಯಿಂದ ಪರಾಙ್ಮುಖರನ್ನಾಗಿ ಮಾಡುವುದಿಲ್ಲ." ಆದುದರಿಂದ ಅಲ್ಲಾಹನನ್ನು ಬಹುವಾಗಿ ಸ್ಮರಿಸಿರಿ ಮತ್ತು ಜಲ್ಸ ವ್ಯವಹಾರದ ನಡುವೆ ವಿಶ್ರಾಂತಿಯ ವೇಳೆ ಮತ್ತು ರಾತ್ರಿಯ ವೇಳೆಯೂ ಪ್ರಾರ್ಥಿಸಿರಿ. ಒಂದು ಪ್ರಬಲ ಪ್ರತಿಜ್ಞೆಯನ್ನು ಮಾಡಿ ಓ ಅಲ್ಲಾಹನೆ ನಾವು ಒಳ್ಳೆಯ ನಿಯತ್ತಿನಿಂದ ಈ ಜಲ್ಸದಲ್ಲಿ ಭಾಗವಹಿಸಿದ್ದೇವೆ. ಅದರ ಸ್ಥಾಪನೆ ನಿನ್ನ ವಿಶೇಷವಾದ ಸಹಕಾರ ಹಾಗೂ ನಿನ್ನ ಬಯಕೆಯ ಫಲವಾಗಿದೆ. ನಾವು ನಿನ್ನ ಸಂತೃಪ್ತಿ ಪಡೆಯಲು, ಅಧಿಕಾಧಿಕ ನಿನ್ನನ್ನು ಸ್ಮರಿಸಲು ಮತ್ತು ನಿನ್ನ ಸ್ನೇಹವನ್ನು ಪಡೆಯಲು ಈ ಜಲ್ಸದಲ್ಲಿ ಭಾಗವಹಿಸಿದ್ದೇವೆ. ನಮಗೆ ಇದರ ಎಲ್ಲ ಅನುಗ್ರಹಗಳಿಂದ ಪಾಲುದಾರರನ್ನಾಗಿ ಮಾಡು, ಮತ್ತು ನಿನ್ನ ಬಯಕೆಯನುಸಾರ ನಮ್ಮಲ್ಲಿ ಪರಿವರ್ತನೆಯನ್ನು ಉಂಟು ಮಾಡು. ಆ ಉದ್ದೇಶದಿಂದಲೇ ನೀನು ಹಝ್ರತ್ ರಸೂಲುಲ್ಲಾಹ್(ಸ) ರವರ ಸತ್ಯಸಂಧಕನನ್ನು ಈ ಲೋಕದಲ್ಲಿ ಕಳುಹಿಸಿದೆ. ಆದ್ದರಿಂದ ನಮ್ಮನ್ನು ನಿಷ್ಠೆಯಿಂದ ಬೈಅತ್ತಿನ ವಚನವನ್ನು ಪಾಲಿಸುವವವರನ್ನಾಗಿ ಮಾಡು." ಜಲ್ಸದ ಈ ಮೂರು ದಿನಗಳ ನಂತರ ನಿಮಗೆ ಲೌಕಿಕ ಕಾರ್ಯಗಳಿಗಾಗಿ ಮರಳಬೇಕಾಗುತ್ತದೆ. ಆದರೂ ನೀವು ಲೌಕಿಕ ಕಾರ್ಯಗಳಿಗಿಂತಲೂ ಧರ್ಮದ ಕಾರ್ಯಗಳಿಗೆ ಪ್ರಾಧಾನ್ಯತೆ ನೀಡಿದಾಗ ಮಾತ್ರ ಈ ಜಲ್ಸದ ಪ್ರಯೋಜನ ಪಡೆಯುವವರಾಗುವಿರಿ. ಎಂತಹ ಸ್ಥಿತಿಯಲ್ಲೂ ಧರ್ಮಕ್ಕೆ ಪ್ರಾಧಾನ್ಯತೆ ನೀಡಬೇಕು. ಸದಾ ನೆನಪಿಡಿರಿ. ಪ್ರತಿ ಅಹ್ಮದಿಯ ಮುಖವಾಡದ ಹಿಂದೆ ಅಹ್ಮದಿಯತ್ತಿನ ಮುಖವಾಡವಿದೆ. ಹಝ್ರತ್ ಮಸೀಹ್ ಮೌಊದ್(ಅ) ರವರ ಮುಖವಾಡವಿದೆ ಮತ್ತು ಇಸ್ಲಾಮಿನ ಗೌರವವಿದೆ.

ಅಲ್ಲಾಹನು ನಿಮಗೆ ಹಝ್ರತ್ ಮಸೀಹ್ ಮೌಊದ್(ಅ) ರವರ ಶಿಕ್ಷಣದ ಮೇಲೆ ಸ್ಥಿರವಾಗಿರುವಂತೆ ದಯಪಾಲಿಸಲಿ ಮತ್ತು ನಿಮಗೆ ಈ ಜಲ್ಸದ ಅಸಂಖ್ಯಾತ ಅನುಗ್ರಹಗಳಿಂದ ಅನುಗ್ರಹಿಸಲಿ ಮತ್ತು ನಿಮಗೆಲ್ಲರಿಗೂ ಅದರಿಂದ ಪರಿಪೂರ್ಣ ರೀತಿಯಲ್ಲಿ ಲಾಭಾನ್ವಿತರನ್ನಾಗಿ ಮಾಡಲಿ. ಅಲ್ಲಾಹನು ನಿಮಗೆ ಬೈಅತ್ತಿನ ಎಲ್ಲ ಹೊಣೆಗಾರಿಕೆಗಳನ್ನು ಪಾಲಿಸುವ ಭಾಗ್ಯ ನೀಡುವಂತಾಗಲಿ, ನೀವು ಸದಾ ಅಹ್ಮದಿಯಾ ಖಿಲಾಫತ್ತಿನ ವಿಧೇಯರಾಗುವಂತೆ ಹಾಗೂ ಅಲ್ಲಾಹನು ನಿಮ್ಮ ಜೀವನದಲ್ಲಿ ವಾಸ್ತವಿಕ ಪರಿವರ್ತನೆಯನ್ನು ಉಂಟು ಮಾಡಿರಿ. ನಿಮಗೆ ಸತ್ಕರ್ಮಗಳಲ್ಲಿ ತಖ್ವ (ಭಯಭಕ್ತಿ) ದಲ್ಲಿ ಹಾಗೂ ಇಸ್ಲಾಮ್ ಮತ್ತು ಮನುಷ್ಯ ಕುಲದ ಸೇವಾ ಕಾರ್ಯಗಳಲ್ಲಿ ಮುಂದುವರೆಯುವಂತೆ ಮಾಡಲಿ. ಅಲ್ಲಾಹನ ಅಪಾರವಾದ ಅನುಗ್ರಹ ನಿಮ್ಮೆಲ್ಲರ ಮೇಲಿರಲಿ.

ವಸ್ಸಲಾಮ್
ಮಿರ್ಝಾ ಮಸ್‌ರೂರ್ ಅಹ್ಮದ್
**ಖಲೀಫತುಲ್ ಮಸೀಹ್ ಖಾಮಿಸ್**

# ಜುಮುಅ ಖುತ್‌ಬ

**ಉಹುದ್ ರಣಾಂಗಣದಲ್ಲಿ ಪತಾಕೆಯನ್ನು ಎತ್ತಿ ಹಿಡಿದಿದ್ದ ಧೀರ ಸೇನಾನಿ ಹಝ್ರತ್ ಮುಸ್‌ಅಬ್ ಬಿನ್ ಉಮೈರ್ ಪತಾಕೆಯನ್ನು ಸಂರಕ್ಷಿಸುವ ತನ್ನ ಹೊಣೆಗಾರಿಕೆಯನ್ನು ಚೆನ್ನಾಗಿ ನಿಭಾಯಿಸಿದರು.**

---

**ಮಕ್ಕದಿಂದ ಹೊರಗೆ ತಬ್ಲೀಗ್ ಮಾಡಿದ ಪ್ರಥಮ ಇಸ್ಲಾಮೀ ಪ್ರಚಾರಕರು ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಆಗಿದ್ದರು.**

---

**ಬೈಅತೆ ಅಖಬ ಊಲದ ಸಂದರ್ಭದಲ್ಲಿ ಮದೀನದ ಹನ್ನೆರಡು ಜನರು ಪ್ರವಾದಿಯವರ ಕೈಯ್ಯಲ್ಲಿ ಕೈ ಇಟ್ಟು ಪ್ರತಿಜ್ಞೆಮಾಡಿದರು. ಅಲ್ಲಾಹನ ಹೊರತು ಬೇರೆ ಯಾರನ್ನೂ ಆರಾಧಿಸಲಾರೆವು, ಕಳ್ಳತನ ಮಾಡಲಾರೆವು, ದುಷ್ಕರ್ಮ ಮಾಡಲಾರೆವು, ಹೆಣ್ಣು ಮಕ್ಕಳನ್ನು ಹತ್ಯೆ ಮಾಡಲಾರೆವು, ಒಬ್ಬರಿನ್ನೊಬ್ಬರ ವಿರುದ್ಧ ಸುಳ್ಳು ಆರೋಪ ಮಾಡಲಾರೆವು, ಅಲ್ಲಾಹನ ಪ್ರವಾದಿಯ ಇನ್ನಿತರ ಉಪದೇಶಗಳನ್ನು ತಿರಸ್ಕರಿಸಲಾರೆವು ಎಂದು ಅವರು ಪ್ರತಿಜ್ಞೆಮಾಡಿದರು.**

**ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಮುಸ್‌ಅಬ್ ಬಿನ್ ಉಮೈರ್‌ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಶಹೀದ್ ಅಝಿಝುಮ್ ತನ್‌ಝೀಲ್ ಅಹ್ಮದ್ ಭಟ್ (ವಖ್‌ಫೇ ನೌ) ಇಬ್ನೆ ಅಖೀಲ್ ಅಹ್ಮದ್ ಭಟ್ ಲಾಹೋರ್, ಬ್ರಿಗೇಡಿಯರ್ ಬಶೀರ್ ಅಹ್ಮದ್ ಸಾಹೆಬ್ ಹಾಗೂ ಡಾ॥ ಹಮೀದುದ್ದೀನ್ ಸಾಹೆಬ್ ಆಫ್ ಫೈಸಲಾಬಾದ್ ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ಜುಮ್‌ಆ ನಮಾಝ್‌ನ ನಂತರ ಅವರ ನಮಾಝೆ ಜನಾಝ ಗಾಯಿಬ್ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **06-03-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಕಳೆದ ವಾರದ ಖುತ್‌ಬದಲ್ಲಿ ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಬಗ್ಗೆ ಪ್ರಸ್ತಾಪಿಸಿದ್ದೆನು. ಆದರೆ ಸ್ವಲ್ಪ ಭಾಗ ಪ್ರಸ್ತಾಪಿಸದೆ ಬಾಕಿಯಾಗಿತ್ತು. ಈ ದಿನ ನಾನು ಅದನ್ನು ವಿವರಿಸುವೆನು. ಹಝ್ರತ್ ಮುಸ್‌ಅಬ್(ರ) ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ ಅವರನ್ನು ಮದೀನದ ಮುಬಲ್ಲಿಗ್ ಆಗಿ ಕಳುಹಿಸಲಾಗಿತ್ತು. ಹಝ್ರತ್ ಮುಸ್‌ಅಬರ ಚಟುವಟಿಕೆಗಳನ್ನು ವಿವರಿಸುತ್ತಾ ಅವರು ಹೇಳುತ್ತಾರೆ: "ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಅಲ್ಲಾಹನ ಕಡೆಯಿಂದ ನಿಮ್ಮ ಹಿಜ್ರತ್‌ನ ಸಮಯ ಹತ್ತಿರವಾಗುತ್ತಿದೆ ಎಂದು ಪದೇ ಪದೇ ವಾರ್ತೆ ನೀಡಲಾಗತ್ತಿತ್ತು. ಅದೇ ರೀತಿ ನಿಮ್ಮ ಹಿಜ್ರತ್ ಎಂತಹ ಸ್ಥಳಕ್ಕಾಗುವುದು ಎಂದರೆ ಅಲ್ಲಿ ಬಾವಿಗಳು ಹಾಗೂ ಖರ್ಜೂರದ ತೋಟಗಳು ಹೆಚ್ಚಾಗಿರುವುದು. ಮೊದಲಿಗೆ ಅವರು ಯಮಾಮವನ್ನು ಹಿಜ್ರತ್‌ನ ಸ್ಥಳ ಇರಬಹುದು ಎಂದು ಊಹಿಸಿದರು ಆದರೆ ಹುಝೂರ್(ಸ) ಅವರ ಮನಸ್ಸಿನಿಂದ ಆ ಸ್ಥಳವನ್ನು ತೆರೆಯಲಾಯಿತು ಅನಂತರ ಹುಝೂರ್(ಸ) ಅಲ್ಲಾಹನ ಭವಿಷ್ಯವಾಣಿಯ ಪ್ರಕಾರ ಯಾವ ಸ್ಥಳ ಇಸ್ಲಾಮ್ ಧರ್ಮಕ್ಕೆ ಉತ್ತಮ ಎಂದು ಭಾವಿಸುತ್ತಾನೋ ಅದನ್ನು ಅಲ್ಲಾಹನು ಸ್ವತಃ ನೇಮಿಸುವನು ಎಂದು ನಿರೀಕ್ಷಿಸುತ್ತಿದ್ದರು. ಅದೇ ಕಾಲದಲ್ಲಿ ಹಜ್‌ಗೋಸ್ಕರ ಅರಬ್ ದೇಶದ ನಾಲ್ಕು ದಿಕ್ಕುಗಳಿಂದಲೂ ಜನರು ಆಗಮಿಸಿ ಮಕ್ಕದಲ್ಲಿ ಜಮಾಯಿಸುತ್ತಿದ್ದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತನ್ನ ರೂಢಿ ಪ್ರಕಾರ, ಎಲ್ಲಿಯಾದರೂ ಸ್ವಲ್ಪ ಜನರು ಒಟ್ಟಿಗೆ ನಂತಿರುವುದಾಗಿ ಕಂಡರೆ ಅವರ ಸಮೀಪಕ್ಕೆ ಹೋಗಿ ತೌಹೀದ್ ಬಗ್ಗೆ ಉಪದೇಶಿಸುತ್ತಿದ್ದರು. ಅಲ್ಲಾಹನ ಸಾಮ್ರಾಜ್ಯ ಸ್ಥಾಪಿಸಲ್ಪಡುವ ಬಗ್ಗೆ ಶುಭವಾರ್ತೆ ನೀಡುತ್ತಿದ್ದರು. ದೌರ್ಜನ್ಯ, ದುಷ್ಕರ್ಮ, ವಿಧ್ವಂಸಕ ಕೃತ್ಯ ಮತ್ತು ಉದ್ಧಟತನದಿಂದ ದೂರ ಸರಿಯಲು ಉಪದೇಶಿಸುತ್ತಿದ್ದರು. ಕೆಲವರು ನಿಮ್ಮ ಉಪದೇಶಗಳನ್ನು ಆಲಿಸಿ ಆಶ್ಚರ್ಯದಿಂದ ದೂರ ಸರಿಯುತ್ತಿದ್ದರು. ಇನ್ನು ಕೆಲವರು ನಿಮ್ಮ ಉಪದೇಶಗಳನ್ನು ಆಲಿಸುತ್ತಿರುವಾಗ ಮಕ್ಕದ ಜನರು ಅಲ್ಲಿಗೆ ಬಂದು ಅವರನ್ನು ಅಲ್ಲಿಂದ ಸರಿಸುತ್ತಿದ್ದರು. ಇದಕ್ಕು ಮುಂಚೆ ನಿಮ್ಮ ಮಾತುಗಳನ್ನು ಆಲಿಸಿದ್ದ ಜನರು ಹಾಸ್ಯ ಮಾಡುತ್ತ ಹೊರಟಿದ್ದರು. ಅದೇ ಸಂದರ್ಭದಲ್ಲಿ ಒಮ್ಮೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೀನಾದ ಕಣಿವೆ ಪ್ರದೇಶದಲ್ಲಿ ತಿರುಗಾಡುತ್ತಾ ಇದ್ದಾಗ ಮದೀನದ ನಿವಾಸಿಗಳಾದ ಆರೇಳು ಜನರ ಕಡೆಗೆ ಅವರ ದೃಷ್ಠಿ ಹರಿಯಿತು. ನೀವು ಯಾವ ಗೋತ್ರದವರು ಎಂದು ಅವರೊಡನೆ ಕೇಳಿದರು. ಆಗ ಆ ಜನರು ನಾವು ಖಝ್‌ರಜ್ ಗೋತ್ರದವರು ಎಂದು ಹೇಳಿದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು: ನಿಮ್ಮ ಗೋತ್ರ ಯಹೂದಿಯರೊಂದಿಗೆ ಪ್ರತಿಜ್ಞಾಬದ್ಧವಾದ ಗೋತ್ರವಲ್ಲವೇ? ಅವರು ಹೇಳಿದರು: ಹೌದು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ಸ್ವಲ್ಪ ಹೊತ್ತು ಕುಳಿತುಕೊಂಡು ನನ್ನ ಮಾತನ್ನು ಆಲಿಸುವಿರಾ? ಮದೀನದ ಆ ಜನರು ಅವರ ಬಗ್ಗೆ ತಿಳಿದಿದ್ದ ಕಾರಣ ಕುತೂಹಲದಿಂದ ಅವರ ವಾದಗಳೇನೆಂದು ತಿಳಿಯಲು ಬಯಸಿದರು. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ಕುಳಿತುಕೊಂಡು ಅವರ ಮಾತುಗಳನ್ನು ಆಲಿಸಲು ತೊಡಗಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಲ್ಲಾಹನ ದೊರೆತನ ಸಮೀಪವಾಗಿದೆ. ವಿಗ್ರಹಗಳು ಲೋಕದಿಂದ ಅಳಿಸಲ್ಪಡುವುವು. ಲೋಕದಲ್ಲಿ ತೌಹೀದ್ (ಏಕದೇವ ವಿಶ್ವಾಸ) ಸ್ಥಾಪಿಸಲ್ಪಡುವುದು. ಒಳಿತು ಮತ್ತು ತಖ್ವಾ ಪುನಃ ಲೋಕದಲ್ಲಿ ಸ್ಥಾಪಿಸಲ್ಪಡುವುದು. ಮದೀನದ ಜನರು ಈ ವೈಭವಶಾಲಿ ಅನುಗ್ರಹವನ್ನು ಸ್ವೀಕರಿಸಲು ಸಿದ್ಧರಿರುವರೇ? ಆ ಜನರು ಹೇಳಿದರು: ನಿಮ್ಮ ಉಪದೇಶಗಳನ್ನು ನಾವು ಅಂಗೀಕರಿಸುತ್ತೇವೆ. ಆದರೆ ಮದೀನದಲ್ಲಿ ಇಸ್ಲಾಮಿಗೆ ಆಶ್ರಯ ನೀಡಲು ಸಾಧ್ಯವೇ ಎಂಬುದರ ಬಗ್ಗೆ ನಾವು ನಮ್ಮ ಊರಿಗೆ ಮರಳಿ ನಮ್ಮ ಕೋಮಿನ ಜನರೊಂದಿಗೆ ಮಾತನಾಡುವೆವು. ಮುಂದಿನ ವರ್ಷ ನಮ್ಮ ಕೋಮಿನವರ ತೀರ್ಮಾನವನ್ನು ನಾವು ನಿಮಗೆ ತಿಳಿಸುವೆವು. ಈ ಜನರು ಮರಳಿ ಹೋಗಿ ತಮ್ಮ ಸಂಬಂಧಿಕರೊಂದಿಗೆ ಮತ್ತು ಸ್ನೇಹಿತರೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳ ಬಗ್ಗೆ ವಿವರಿಸಲು ತೊಡಗಿದರು. ಆ ಸಂದರ್ಭದಲ್ಲಿ ಮದೀನದಲ್ಲಿ ಎರಡು ಗೋತ್ರಗಳು ಔಸ್ ಮತ್ತು ಖಝ್‌ರಜ್ ಇರುತ್ತಿದ್ದರು ಅದೇ ರೀತಿ ಮೂರು ಗೋತ್ರಗಳು ಅಂದರೆ ಬನೂ ಖರೀಝು, ಬನೂ ನಝೀರ್ ಮತ್ತು ಬನೂ ಖಯನಖ ಇರುತ್ತಿದ್ದರು. ಔಸ್ ಹಾಗೂ ಖಝ್‌ರಜ್ ಇವರಿಬ್ಬರ ನಡುವೆ ಜಗಳವಿತ್ತು. ಬನೂ ಖರೀಝು ಮತ್ತು ಬನೂ ನಝೀರ್ ಔಸ್ ಗೋತ್ರದವರೊಂದಿಗೆ ಇದ್ದರು ಅದೇ ರೀತಿ ಬನೂ ಖೈನಖ ಖಝ್‌ರಜ್ ಗೋತ್ರದವರೊಂದಿಗೆ ಇದ್ದರು. ಸುದೀರ್ಘ ಕಾಲದ ಯುದ್ಧದ ನಂತರ ಅವರಲ್ಲಿ ಎಲ್ಲರೂ ಒಗ್ಗೂಡಿ ಇರಬೇಕು ಎಂಬ ಭಾವನೆ ಉದ್ಭವಿಸುತ್ತಿತ್ತು. ಕೊನೆಗೆ ಪರಸ್ಪರ ತಿಳುವಳಿಕೆಯಿಂದ ಅಬ್ದುಲ್ಲಾ ಬಿನ್ ಉಬಯ ಬಿನ್ ಸುಲೂಲ್ ಖಝ್‌ರಜ್ ಗೋತ್ರದ

ಸರದಾರನಾಗಿದ್ದನು ಅವನನ್ನು ಮದೀನದವರು ತನ್ನ ನಾಯಕನನ್ನಾಗಿ ಸ್ವೀಕರಿಸಬೇಕೆಂದು ನಿರ್ಧರಿಸಿದರು. ಯಹೂದಿಯರೊಂದಿಗೆ ಸಂಬಂಧವಿದ್ದ ಕಾರಣದಿಂದ ಔಸ್ ಮತ್ತು ಖಝ್‌ರಜ್ ಗೋತ್ರದ ಜನರು ಬೈಬಲಿನ ಭವಿಷ್ಯವಾಣಿಗಳನ್ನು ಆಲಿಸುತ್ತಾ ಇದ್ದರು. ಯಹೂದಿಯರು ತಮ್ಮ ವಿಪತ್ತುಗಳ ಬಗ್ಗೆ ಮತ್ತು ಕಷ್ಟಗಳ ಬಗ್ಗೆ ವಿವರಿಸುವಾಗ ಕೊನೆಗೆ ಹೀಗೆ ಸಹ ಹೇಳುತ್ತಿದ್ದರು: ಹಝ್ರತ್ ಮೂಸಾರಿಗೆ ಸಮಾನರಾಗಿ ಒಬ್ಬ ಪ್ರವಾದಿ ಆಗಮಿಸುವರು. ಆಗಮಿಸುವ ಕಾಲ ಸಮೀಪವಾಗಿದೆ. ಅವರು ಆಗಮಿಸಿದ ನಂತರ ನಾವು ಪುನಃ ಲೋಕದಲ್ಲಿ ಜಯಗಳಿಸುವೆವು. ಯಹೂದಿಯರ ಶತ್ರುಗಳು ನಾಶಗೊಳಿಸಲ್ಪಡುವರು. ಹಜ್‌ಗೆ ಹೋಗಿ ಬಂದವರಿಂದ ಮದೀನದ ಜನರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಾದಗಳ ಬಗ್ಗೆ ತಿಳಿದಾಗ ಅವರು ಸತ್ಯವಂತರೆಂದು ಅವರ ಹೃದಯಗಳಲ್ಲಿ ಭಾಸವಾಯಿತು. ಈ ಪ್ರವಾದಿ ಯಹೂದಿಯರು ನಮಗೆ ಸಮಾಚಾರ ನೀಡುತ್ತಿದ್ದ ಆ ಪ್ರವಾದಿಯೇ ಆಗಿದ್ದಾರೆ ಎಂದು ಅವರು ಮನಗಂಡರು. ಅನೇಕ ಯುವ ಜನರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳ ಸತ್ಯತೆಯಿಂದ ಪ್ರಭಾವಿತರಾದರು. ಯಹೂದಿಯರಿಂದ ಅಲಿಸಿದ ಭವಿಷ್ಯವಾಣಿಗಳು ಅವರು ವಿಶ್ವಾಸಿಗಳಾಗಲು ಸಹಾಯಕವಾದುವು. ಹಾಗೆ ಮುಂದಿನ ವರ್ಷ ಹಜ್ ಸಂದರ್ಭದಲ್ಲಿ ಮದೀನದ ಜನರು ಮಕ್ಕಕ್ಕೆ ಬಂದರು. ಮದೀನದ ಹನ್ನೆರಡು ಜನರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧರ್ಮದಲ್ಲಿ ಸೇರುವೆವು ಎಂದು ನಿರ್ಧಾರ ಮಾಡಿ ಹೊರಟದ್ದರು. ಅದರಲ್ಲಿ ಹತ್ತು ಜನ ಖಝ್‌ರಜ್ ಗೋತ್ರದವರು ಮತ್ತು ಇಬ್ಬರು ಔಸ್ ಗೋತ್ರದವರಾಗಿದ್ದರು. ಮಿನಾದಲ್ಲಿ ಈ ಜನರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಭೇಟಿಯಾದರು. ಅವರು ಪ್ರವಾದಿಯವರ ಕೈಯ್ಯಲ್ಲಿ ಕೈ ಇಟ್ಟು ಪ್ರತಿಜ್ಞೆ ಮಾಡಿದರು. ಅಲ್ಲಾಹನ ಹೊರತು ಬೇರೆ ಯಾರನ್ನೂ ಆರಾಧಿಸಲಾರೆವು, ಕಳ್ಳತನ ಮಾಡಲಾರೆವು, ದುಷ್ಕರ್ಮ ಮಾಡಲಾರೆವು, ಹೆಣ್ಣು ಮಕ್ಕಳನ್ನು ಹತ್ಯೆ ಮಾಡಲಾರೆವು, ಒಬ್ಬರಿನ್ನೊಬ್ಬರ ವಿರುದ್ಧ ಸುಳ್ಳು ಆರೋಪ ಮಾಡಲಾರೆವು, ಅಲ್ಲಾಹನ ಪ್ರವಾದಿಯ ಇನ್ನಿತರ ಉಪದೇಶಗಳನ್ನು ತಿರಸ್ಕರಿಸಲಾರೆವು ಎಂದು ಅವರು ಪ್ರತಿಜ್ಞೆ ಮಾಡಿದರು.

ಈ ಜನರು ಮದೀನಕ್ಕೆ ಮರಳಿದಾಗ ಅವರು ತಮ್ಮ ಕೋಮಿನ ಜನರಿಗೆ ಮತ್ತೂ ಹೆಚ್ಚು ಉತ್ಸಾಹದಿಂದ ತಬ್ಲೀಗ್ ಮಾಡಲು ತೊಡಗಿದರು. ಮದೀನದ ಮನೆಗಳಿಂದ ವಿಗ್ರಹಗಳು ಹೊರಗೆಸೆಯಲ್ಪಡಲು ಪ್ರಾರಂಭವಾಯಿತು. ವಿಗ್ರಹಗಳ ಮುಂದೆ ತಲೆ ಬಾಗುತ್ತಿದ್ದವರು ತಲೆ ಎತ್ತಿ ಚಲಿಸಲು ಪ್ರಾರಂಭಿಸಿದರು. ಏಕದೇವನ ಹೊರತು ಬೇರೆ ಯಾರ ಮುಂದೆಯೂ ಈ ಜನರು ತಮ್ಮ ಹಣೆಗಳನ್ನು ಬಾಗಿಸಲು ಸಿದ್ಧರಾಗಲಿಲ್ಲ. ಯಹೂದಿಯರು ಆಶ್ಚರ್ಯ ಚಕಿತರಾದರು – ನೂರಾರು ವರ್ಷಗಳ ಸ್ನೇಹ ಮತ್ತು ತಬ್ಲೀಗ್‌ನಿಂದ ತಮ್ಮಿಂದ ಸಾಧಿಸಲಾಗದ ಬದಲಾವಣೆ ಇಸ್ಲಾಮ್ ಕೆಲವೇ ದಿನಗಳಲ್ಲಿ ಉಂಟುಮಾಡಿದುದು ಹೇಗೆ ಎಂದು! ತೌಹೀದ್ ಬಗ್ಗೆ ಪ್ರವಚನಗಳು ಮದೀನದ ಜನರ ಹೃದಯಗಳಲ್ಲಿ ಮನೆ ಮಾಡಲು ತೊಡಗಿತು. ಒಬ್ಬರ ನಂತರ ಇನ್ನೊಬ್ಬರಂತೆ ಜನರು ಬಂದು ಮುಸ್ಲಿಮರೊಂದಿಗೆ ನಿಮ್ಮ ಧರ್ಮವನ್ನು ಕಲಿಸಿರಿ ಎಂದು ಹೇಳತೊಡಗಿದರು. ಆದರೆ ಮದೀನದ ಈ ನವ ಮುಸ್ಲಿಮರು ಇಸ್ಲಾಮಿನ ಉಪದೇಶಗಳ ಬಗ್ಗೆ ತಾವೇ ಸ್ವತಃ ಪೂರ್ಣವಾಗಿ ಅರಿತಿರಲಿಲ್ಲ. ನೂರಾರು ಸಾವಿರಗಟ್ಟಲೆ ಜನರಿಗೆ ಇಸ್ಲಾಮ್ ಬಗ್ಗೆ ಸವಿಸ್ತಾರವಾಗಿ ತಿಳಿಸುವಷ್ಟು ಸಂಖ್ಯೆಯಲ್ಲಿ ಅವರಿರಲಿಲ್ಲ. ಆದುದರಿಂದ ಮದೀನದವರು ಮಕ್ಕಕ್ಕೆ ಒಬ್ಬರು ಪ್ರಚಾರಕರನ್ನು ಕಳುಹಿಸಬೇಕೆಂದು ಅಪೇಕ್ಷಿಸಿದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಗ ತಾನೆ ಅಬಿಸೀನಿಯಾದಿಂದ ಮರಳಿ ಬಂದ ಹಝ್ರತ್ ಮುಸ್‌ಅಬ್‌ರನ್ನು ಮದೀನದಲ್ಲಿ ಇಸ್ಲಾಮಿನ ತಬ್ಲೀಗ್ ಮಾಡಲು ಕಳುಹಿಸಿದರು. ಮಕ್ಕದಿಂದ ಹೊರಗೆ ತಬ್ಲೀಗ್ ಮಾಡಿದ ಪ್ರಥಮ ಇಸ್ಲಾಮೀ ಪ್ರಚಾರಕರು ಹಝ್ರತ್ ಮುಸ್‌ಅಬ್ ಬಿನ್ ಉಮ್ಮೈರ್(ರ) ಆಗಿದ್ದರು. (ದೀಬಾಚ ತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್ ಸಂಪುಟ–20, ಪುಟ–214–216)

ಇನ್ನೊಂದು ಕಡೆ ಈ ಘಟನೆಯ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಮದೀನದವರಿಗೆ ಇಸ್ಲಾಮ್ ಧರ್ಮದ ಬಗ್ಗೆ ತಿಳಿದಾಗ ಮತ್ತು ಹಜ್ಜ್ ಸಂದರ್ಭದಲ್ಲಿ ಮದೀನದವರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಭೇಟಿ ಮಾಡಿ ತಮ್ಮ ಸತ್ಯತೆಯನ್ನು ಸ್ವೀಕರಿಸಿದಾಗ ಅವರು ಅವರ ಗೋತ್ರಗಳಿಗೆ ಹಿಂದಿರುಗಿ ಹೋಗಿ ಯಾವ ಪ್ರವಾದಿ ಅವತರಿಸಬೇಕು ಎಂದು ಮದೀನದಲ್ಲಿ ಯಹೂದಿಯರು ನಿರೀಕ್ಷಿಸುತ್ತಿದ್ದರೋ ಆ ಪ್ರವಾದಿಯು ಮಕ್ಕದಲ್ಲಿ ಜನಿಸಿದ್ದಾನೆ ಎಂದು ತಿಳಿಸಿದರು. ಈ ಮಾತು ಅವರ ಮನಸ್ಸಿನಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಕಡೆ ಗಮನ ಸೆಳೆಯಿತು. ಆದ್ದರಿಂದ ಅವರು ಇನ್ನೊಂದು ಹಜ್ಜ್‌ನ ಸಂದರ್ಭದಲ್ಲಿ ಒಂದು ತಂಡದ ರೂಪದಲ್ಲಿ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಳಿ ಕಳುಹಿಸಿದರು. ಆ ತಂಡವೂ ಪ್ರವಾದಿ(ಸ) ಅವರೊಂದಿಗೆ ಸಂವಾದ ನಡೆಸಿ ಅವರನ್ನು ಸ್ವೀಕರಿಸಿ ಬೈಅತ್ ಮಾಡಿದರು. ಆ ಕಾಲದಲ್ಲಿ ಮಕ್ಕದಲ್ಲಿ ಪ್ರವಾದಿ(ಸ) ಅವರೊಡನೆ ವಿರೋಧವೂ ಇತ್ತು. ಈ ಭೇಟಿಯು ಒಂದು ಕಣಿವೆಯಲ್ಲಿ ಮಕ್ಕದವರ ಕಣ್ಣು ತಪ್ಪಿಸಿ ಆಯಿತು ಮತ್ತು ಅಲ್ಲಿಯೇ ಬೈಅತ್ ಸಹ ನಡೆಯಿತು. ಆದ್ದರಿಂದ ಅದನ್ನು ಬೈಅತೆ ಅಖಬ ಎನ್ನುತ್ತಾರೆ. ಅಖಬ ಎಂದರೆ ಕಷ್ಟಕರವಾದ ಕಣಿವೆ ಅಥವಾ ಬೆಟ್ಟ, ಅಥವಾ ಬಹು ಕಷ್ಟದಿಂದ ಸಾಗಿ ಹೋಗುವ ಬೆಟ್ಟದ ಮಾರ್ಗ. ಹೀಗೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಆ ಜನರನ್ನು ಮದೀನದ ಮುಮಿನ್ (ಭಯ ಭಕ್ತಿವುಳ್ಳವರು) ಅವರ ಸಂಘಟನೆಗೆ ನಾಯಕನನ್ನಾಗಿ ನೇಮಿಸಿದರು. ಇಸ್ಲಾಮ್ ಧರ್ಮದ ಪ್ರಚಾರ ಮಾಡಲು ಹೇಳಿದರು ಮತ್ತು ಅವರ ಸಹಾಯಕ್ಕಾಗಿ ತಮ್ಮ ಓರ್ವ ಯುವ ಸಹಾಬಿ ಮುಸ್‌ಅಬ್ ಬಿನ್ ಉಮ್ಮೈರ್ ಅವರನ್ನು ಅಲ್ಲಿನ ಮುಸ್ಲಿಮರಿಗೆ ಇಸ್ಲಾಮಿನ ಬೋಧನೆಗಳನ್ನು ಬೋಧಿಸಲು ಕಳುಹಿಸಿದರು...... ಇವರು ಹೋಗುತ್ತಿರುವಾಗ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ಒಂದು ವೇಳೆ ತಮಗೆ ಮಕ್ಕ ತ್ಯಜಿಸ ಬೇಕಾದ್ದಲ್ಲಿ ನೀವು ಮದೀನಕ್ಕೆ ಆಗಮಿಸಿರಿ ಎಂದು ಅಹ್ವಾನಿಸಿದರು. ಅನಂತರ ಈ ಜನರು ಮದೀನಕ್ಕೆ ತೆರಳಿದ ಕೆಲವೇ ದಿವಸಗಳಲ್ಲಿ ಇಸ್ಲಾಮ್ ಧರ್ಮವೂ ಹರಡಿತು. ಅನಂತರ ರಸೂಲುಲ್ಲಾಹ್ ಸಲ್ಲಲ್ಲಾಹಿ ಅಲೈಹಿವಸಲ್ಲಮರು ಇನ್ನೂ ಕೆಲವು ಸಹಾಬರನ್ನು ಕಳುಹಿಸಿದರು ಅವರಲ್ಲಿ ಹಝ್ರತ್ ಉಮರ್(ರ) ಅವರ ಸಹ ಇದ್ದರು... ತದನಂತರ ಹಿಜ್ರತ್ ಮಾಡಲು ಆಜ್ಞಾಪನೆ ದೊರಕಿದ ನಂತರ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಸಹ ಹೊರಟರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಆಗಮಿಸಿದ ಕೆಲವೇ ಕಾಲದಲ್ಲಿ ಮುಶ್‌ರಿಕ್ (ಬಹು ದೇವಾರಾಧಕರು) ಆದ ಮದೀನದವರು ಮುಸ್ಲಿಮರಾದರು." (ತಫ್‌ಸೀರೆ ಕಬೀರ್ ಸಂಪುಟ–171, ಫರ್‌ಹಂಗ್ ಸೀರತ್ ಪುಟ–203. ಅಝ್ಝುವಾರ ಅಕಾಡಮಿ ಪಬ್‌ಲಿಕೇಷನ್ ಕರಾಚಿ 2003)

ಹಿಜ್‌ರತ್ ಬಗ್ಗೆ ಆಜ್ಞೆ ದೊರೆತಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ವಲಸೆ ಹೋದರು. ಅಲ್ಲಿ ಅವರು ಹಝ್ರತ್ ಮುಸ್‌ಅಬ್ ಮತ್ತು ಹಝ್ರತ್ ಅಬೂ ಅಯ್ಯೂಬ್ ಅನ್‌ಸಾರಿ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದರು. (ಅತ್ತಬಖಾತುಲ್ ಕುಬ್ರ ಬಾಗ–3, ಪುಟ–88, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಮುಸ್‌ಅಬ್ ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಬದರ್ ಮತ್ತು ಉಹುದ್ ಯುದ್ಧಗಳ ಸಂದರ್ಭದಲ್ಲಿ ಮುಹಾಜಿರ್‌ಗಳ ದೊಡ್ಡ ಪತಾಕೆ ಹಝ್ರತ್ ಮುಸ್‌ಅಬ್‌ರ ಕೈಯಲ್ಲಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆ ಪತಾಕೆಯನ್ನು ಅವರಿಗೆ ಕೊಟ್ಟಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–89, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಇನ್ನೊಂದು ವರದಿಯು ಹೀಗಿದೆ ಅದನ್ನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ಅವರು ಸೀರತ್ ಖಾತುಮುನ್ನಬೀಯೀನ್‌ನಲ್ಲಿ ಬರೆದಿದ್ದಾರೆ ಉಹುದ್ ಯುದ್ಧದಲ್ಲಿಯು ಸಹ ಮುಹಾಜಿರೀನರ ಪತಾಕೆಯು ಹಝ್ರತ್ ಮುಸಬ್ ಬಿನ್ ಯಮ್ಮೈರ್(ರ) ಅವರ ಬಳಿ ಇತ್ತು.

"ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಇಸ್ಲಾಮಿನ ಸೈನ್ಯವನ್ನು ಸಾಲಾಗಿ ನಿಲ್ಲಿಸಿ ಅವರನ್ನು ಅನೇಕ ಗುಂಪುಗಳಾಗಿ ಮಾಡಿ ಆ ಪ್ರತಿ ಗುಂಪಿಗೆ ಓರ್ವ ನಾಯಕನನ್ನು ನೇಮಿಸಿದರು. ಆ ಸಂದರ್ಭದಲ್ಲಿ ಖುರೈಶಿನ ಗುಂಪಿನ ಪತಾಕೆಯು ತಲ್‌ಹ(ರ) ಅವರಿಗೆ ನೀಡಬೇಕೆಂದು ಹೇಳಲಾಯಿತು. ತಲ್‌ಹ(ರ) ಒಂದು ಶ್ರೇಷ್ಠ ಕುಟುಂಬ ಖುಸ್ಸ ಬಿನ್ ಕಿಲಾಬ್ ಅವರು ಸ್ಥಾಪಿತಗೊಳಿಸಿದ ವ್ಯವಸ್ಥೆಯೊಂದಿಗೆ ಯುದ್ಧಗಳಲ್ಲಿ ಖುರೈಶರ ಪತಾಕೆಯನ್ನು ಎತ್ತಿ ಹಿಡಿದಿದ್ದ ಧೀರ ಸೇನಾನಿ ಆಗಿದ್ದನು. ಅನಂತರ ಹುಝೂರ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು. ನಾವು ಕೋಮಿನ ವಿಧೇಯತೆಯನ್ನು ತೋರಿಸಲು ಹೆಚ್ಚು ಆದ್ಯತೆ ನೀಡುವೆವು. ಆದ್ದರಿಂದ ನೀವು ಹಝ್ರತ್ ಅಲಿ(ರ) ಅವರಿಂದ ಮುಹಾಜಿರೀನರ ಪತಾಕೆಯನ್ನು ತೆಗೆದುಕೊಂಡು ಮುಸ್‌ಅಬ್ ಬಿನ್ ಉಮ್ಮೈರ್ ಅವರಿಗೆ ನೀಡಿದರು. ಅವರು ತಲ್‌ಹರವರು ಸೇರಿದ್ದ ಕುಟುಂಬದ ಒಂದು ಸದಸ್ಯರಾಗಿದ್ದರು. (ಸೀರತ್ ಖಾತುಮುನ್ನಬೀಯೀನ್, ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ. ಎ, ಪುಟ–488)

ಹಝ್ರತ್ ಮುಸ್‌ಅಬ್, ಉಹುದ್ ಯುದ್ಧದಲ್ಲಿ ಶಹೀದರಾದರು. ಅವರು ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ನಿಂತು ಹೋರಾಡುತ್ತಿದ್ದರು. ಹೋರಾಡುತ್ತಾ ಶಹೀದರಾದರು. ಅವರನ್ನು ಇಬ್ನು ಖಮೀಅ ಶಹೀದರನ್ನಾಗಿ ಮಾಡಿದನು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಮ್ ಪುಟ–383, ಗಝ್ವ ಎ ಉಹುದ್, ದಾರ್ ಇಬ್ನೆ ಹಝ್ಮ್ ಬೈರೂತ್ 2009)

ಚರಿತ್ರೆಯಲ್ಲಿ ಹೀಗೆ ಬರೆಯಲಾಗಿದೆ: ಉಹುದ್ ರಣಾಂಗಣದಲ್ಲಿ ಪತಾಕೆಯನ್ನು ಎತ್ತಿ ಹಿಡಿದಿದ್ದ ಧೀರ ಸೇನಾನಿ ಹಝ್ರತ್ ಮುಸ್‌ಅಬ್ ಬಿನ್ ಉಮ್ಮೈರ್ ಪತಾಕೆಯನ್ನು ಸಂರಕ್ಷಿಸುವ ತನ್ನ ಹೊಣೆಗಾರಿಕೆಯನ್ನು

ಚೆನ್ನಾಗಿ ನಿಭಾಯಿಸಿದರು. ಉಹುದ್ ಯುದ್ಧದ ದಿನ ಹಝ್ರತ್ ಮುಸ್‌ಅಬ್ ತನ್ನ ಬಲಗೈಯಲ್ಲಿ ಪತಾಕೆ ಎತ್ತಿ ಹಿಡಿದಿದ್ದರು. ಕುದುರೆ ಸವಾರನಾಗಿದ್ದ ಇಬ್ನು ಖಮೀಅ ಅವರ ಬಳಿಗೆ ಬಂದು ಹಝ್ರತ್ ಮುಸ್‌ಅಬ್ ಪತಾಕೆ ಹಿಡಿದಿದ್ದ ಬಲಗೈ ತೋಳನ್ನು ಖಡ್ಗದಿಂದ ಆಕ್ರಮಿಸಿ ತುಂಡರಿಸಿದರು. ಆಗ ಹಝ್ರತ್ ಮುಸ್‌ಅಬ್ ಪವಿತ್ರ ಖುರ್‌ಆನಿನ ಈ ವಚನ ಪಠಿಸಿದರು:- **ವಮಾ ಮುಹಮ್ಮದುನ್ ಇಲ್ಲಾ ರಸೂಲುನ್ ಖದ್‌ಖಲತ್ ಮಿನ್ ಖಬ್‌ಲಿಹಿರ್ರುಸುಲ್** – ಮುಹಮ್ಮದ್ ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರು ಗತಿಸಿದ್ದಾರೆ. (3:145). ಅವರು ಪತಾಕೆಯನ್ನು ಎಡಗೈಯಲ್ಲಿ ಎತ್ತಿ ಹಿಡಿದರು. ಇಬ್ನು ಖಮೀಅ ಅವರ ಎಡಗೈಯನ್ನೂ ಕತ್ತರಿಸಿದನು. ಆಗ ಅವರು ತನ್ನೆರಡು ತೋಳುಗಳಿಂದಲೂ ಇಸ್ಲಾಮಿನ ಪತಾಕೆಯನ್ನು ತನ್ನ ಎದೆಗೆ ತಾಗಿಸಿ ಇರಿಸಿದರು. ಆಗ ಇಬ್ನು ಖಮೀಅ ಈಟಿಯಿಂದ ಹಝ್ರತ್ ಮುಸ್‌ಅಬ್‌ರ ಎದೆಗೆ ತಿವಿದನು. ಈಟಿ ತುಂಡಾಯಿತು ಹಝ್ರತ್ ಮುಸ್‌ಅಬ್ ಬಿದ್ದರು. ಆಗ ಬನೂ ಅಬ್ದುದ್ದಾರ್‌ನಿಂದ ಎರಡು ಜನರು ಸುವೈಬಿತ್ ಬಿನ್ ಸಅದ್ ಬಿನ್ ಹರ್‌ಮಲ ಮತ್ತು ಅಬೂರೂಮ್ ಬಿನ್ ಉಮೈರ್ ಮುಂದೆ ಬಂದರು ಮತ್ತು ಆ ಪತಾಕೆಯನ್ನು ಅಬೂರೂಮ್ ಬಿನ್ ಉಮೈರ್ ಅವರು ಹಿಡಿದುಕೊಂಡರು. ಅವರು ಆ ಪತಾಕೆಯನ್ನು ಮುಸ್ಲಿಮರು ಹಿಂದಿರುಗುವ ತನಕವೂ ಅವರ ಬಳಿ ಇತ್ತು. ಅನಂತರ ಅವರು ಮದೀನಕ್ಕೆ ಆಗಮಿಸಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ-89, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಅವರು ಶಹೀದರಾದಾಗ ಅವರ ಪ್ರಾಯ 40 ವರ್ಷ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚಾಗಿತ್ತು. (ಉಸದುಲ್ ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ-5, ಪುಟ-176, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2003)

ಈ ಘಟನೆಯನ್ನು ಪ್ರಸ್ತಾಪಿಸುತ್ತ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಅವರು ಸೀರತ್ ಖಾತುಮುನ್ನಬೀಯೀನ್‌ನಲ್ಲಿ ಹೇಳುತ್ತಾರೆ: ಖುರೈಶರ ಸೈನ್ಯವು ನಾಲ್ಕು ದಿಕ್ಕಿನಿಂದಲೂ ಆವರಿಸಿಕೊಂಡಿದ್ದರು ಮತ್ತು ಪದೇ ಪದೇ ತಮ್ಮ ದಾಳಿಗಳಿಂದ ಅವರನ್ನು ಒತ್ತುತ್ತಿದ್ದರು. ಮುಸ್ಲಿಮರು ಇಂತಹ ದಾಳಿಗಳಿಂದ ಸ್ವಲ್ಪ ಹೊತ್ತಿನ ನಂತರ ಸಂಬಾಳಿಸಿಕೊಳ್ಳುತ್ತಿದ್ದೀರ ಬಹುದು ಆದರೆ ಕ್ರೋಧಕರವಾದ ವಿಷಯ ಏನಾಯಿತು ಎಂದರೆ ಖುರೈಶರ ಓರ್ವ ಸೈನಿಕ ಅಬ್ದುಲ್ಲ ಬಿನ್ ಖಮಿಅ ಎಂಬವನು ಮುಸ್ಲಿಮರ ಪತಾಕೆ ಎತ್ತಿ ಹಿಡಿದಿದ್ದ ಧೀರ ಸೇನಾನಿ ಹಝ್ರತ್ ಮುಸ್‌ಅಬ್ ಅವರ ಮೇಲೆ ದಾಳಿ ನಡೆಸಿ ತನ್ನ ಖಡ್ಗದಿಂದ ಅವರ ಬಲಗೈಯನ್ನು ಕತ್ತರಿಸಿ ಹಾಕಿದನು. ಮುಸ್‌ಅಬ್‌ರವರು ತಕ್ಷಣ ಆ ಪತಾಕೆಯನ್ನು ತಮ್ಮ ಎಡಗೈಯಿಂದ ಹಿಡಿದುಕೊಂಡರು. ಅನಂತರ ಇಬ್ನೆ ಖಮಿಯ ತನ್ನ ಖಡ್ಗದಿಂದ ಅವರ ಎಡಗೈ ಸಹ ಕತ್ತರಿಸಿದನು. ಇದಕ್ಕೆ ಹಝ್ರತ್ ಮುಸ್‌ಅಬ್[ರ] ಅವರು ತನ್ನ ಎರಡು ತೋಳುಗಳಿಂದಲೂ ಇಸ್ಲಾಮಿನ ಪತಾಕೆಯನ್ನು ತನ್ನ ಎದೆಗೆ ತಾಗಿಸಿ ಇರಿಸಿದರು. ಅದಕ್ಕೆ ಇಬ್ನೆ ಖೈಮಿಯ ಮೂರನೇಯ ದಾಳಿ ಎಸಗಿದನು ಹೀಗೆ ಅವರು ಈ ದಾಳಿಯಿಂದ ಶಹೀದರಾದರು. ಪತಾಕೆಯನ್ನು ಬೇರೆ ಮುಸ್ಲಿಮರು ಬಂದು ಸಂರಕ್ಷಿಸಿಕೊಂಡರು. ಹಝ್ರತ್ ಮುಸ್‌ಅಬ್‌ರ ಶರೀರದ ಆಕೃತಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶರೀರದ ಆಕೃತಿಗೆ ಹೋಲಿಕೆ ಇದ್ದ ಕಾರಣ ಇಬ್ನು ಖಮೀಅ ಯೋಚಿಸಿದನು ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕೊಂದಿರುವೆನು ಎಂದು. ಅಥವಾ ಅವನು ಕೇವಲ ಉದ್ಧಟತನದಿಂದಲೂ ಜನರಿಗೆ ಮೋಸವಾಡುವ ಉದ್ದೇಶದಿಂದಲೂ ಹೇಳಿದನು: ನಾನು ಮುಹಮ್ಮದರನ್ನು ಹತ್ಯೆ ಮಾಡಿದೆ ಎಂದು. ಉಹುದ್ ಯುದ್ಧದಲ್ಲಿ ಮುಸ್ಲಿಮರು ಧೈರ್ಯಗೆಡಲು ಇದು ಸಹ ಒಂದು ಕಾರಣವಾಯಿತು." (ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ. ಎ, ಪುಟ-493)

ಉಹುದ್ ಯುದ್ಧದಲ್ಲಿ ಮುಸ್ಲಿಮರ ಧೈರ್ಯಗೆಡಲು ಇದು ಸಹ ಒಂದು ಕಾರಣವಾಗಿತ್ತು ಆದರೆ ಅನಂತರ ಮುಸ್ಲಿಮರು ಒಗ್ಗೂಡಿ ಹೋರಾಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮುಸ್‌ಅಬ್‌ರ ಮೃತ ಶರೀರದ ಸಮೀಪ ತಲಪಿದಾಗ ಶವ ಶರೀರ ಮುಖ ಕೆಳಗಾಗಿ ಬಿದ್ದಿತ್ತು. ಅವರು ಅದರ ಬಳಿ ನಿಂತು ಪವಿತ್ರ ಖುರ್‌ಆನಿನ ಈ ವಚನ ಪಠಿಸಿದರು: **ಮಿನಲ್ ಮುಅ್‌ಮಿನೀನ ರಿಜಾಲುನ್ ಸದಖೂ ಮಾ ಆಹದುಲ್ಲಾಹ ಅಲೈಹಿ, ಫಮಿನ್‌ಹುಮ್ ಮನ್ ಖಝಾ ನಹ್‌ಬಹು ವಮಿನ್‌ಹುಮ್ ಮನ್ ಯನ್‌ತಝಿರು, ವಮಾ ಬದ್ದಲೂ ತಬ್‌ದೀಲ** – ಅಲ್ಲಾಹನೊಂದಿಗೆ ತಾವು ಮಾಡಿದ ಒಡಂಬಡಿಕೆಯನ್ನು ಪಾಲಿಸಿದ ಕೆಲವರು ಆ ಸತ್ಯವಿಶ್ವಾಸಿಗಳ ಪೈಕಿಯಲ್ಲಿದ್ದಾರೆ. ಅವರಲ್ಲಿ ಕೆಲವರು ತಮ್ಮ ಪ್ರತಿಜ್ಞೆಯನ್ನು ಈಡೇರಿಸಿದ್ದಾರೆ. ಇನ್ನು ಕೆಲವರು (ಅದಕ್ಕೋಸ್ಕರ) ಸಂದರ್ಭವನ್ನು ಕಾಯುತ್ತಿದ್ದಾರೆ. ಅವರು ತುಸು ಮಾತ್ರವಾದರೂ ಬದಲಾಗಲಿಲ್ಲ. (33:24). ಅನಂತರ ಹಝ್ರತ್ ನಬಿ ಕರೀಮ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: **ಇನ್ನ ರಸೂಲುಲ್ಲಾಹಿ ಯಶ್‌ಹದು ಅನ್ನಕುಮುಶ್ಶುಹದಾಉ ಇಂದಲ್ಲಾಹಿ ಯೌಮುಲ್ ಖಿಯಾಮತಿ** – ಅಲ್ಲಾಹನ ಸಂದೇಶವಾಹಕ ಸಾಕ್ಷ್ಯ ಹೇಳುತ್ತಾನೆ. ನೀವೆಲ್ಲರೂ ಖಿಯಾಮತ್ ದಿನದಂದು ಅಲ್ಲಾಹನ ಸನ್ನಿಧಿಯಲ್ಲಿ ಶಹೀದರಾಗಿ ಗಣಿಸಲ್ಪಡುವಿರಿ. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸಹಾಬರೊಂದಿಗೆ ಹೇಳಿದರು: ನೀವು ಅವರ ಗೋರಿ ಸಂದರ್ಶಿಸುತ್ತಾ ಸಲಾಮ್ ಹೇಳಿರಿ. ಯಾರ ಕೈಯಲ್ಲಿ ನನ್ನ ಪ್ರಾಣವಿದೆಯೋ ಆ ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ಖಿಯಾಮತ್ ದಿನದ ತನಕ ಶಹೀದರಿಗೆ ಸಲಾಮ್ ಅರ್ಪಿಸುವವರ ಸಲಾಮಿಗೆ ಶಹೀದರು ಉತ್ತರ ಹೇಳುವರು. ಹಝ್ರತ್ ಮುಸ್‌ಅಬ್[ರ] ಅವರ ಸಹೋದರ ಹಝ್ರತ್ ಅಬೂ ರೂಮ್ ಬಿನ್ ಉಮೈರ್, ಹಝ್ರತ್ ಸುವೈಬಿತ್ ಬಿನ್ ಸಾಅದ್ ಮತ್ತು ಹಝ್ರತ್ ಆಮಿರ್ ಬಿನ್ ರಬೀಅರವರು ಹಝ್ರತ್ ಮುಸ್‌ಅಬ್[ರ] ಅವರನ್ನು ಖಬರ್‌ನಲ್ಲೀ ಇರಿಸಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ-3, ಪುಟ-89-90, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಸೀರತ್ ಖಾತುಮುನ್ನಬೀಯೀನ್ ಗ್ರಂಥದಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: "ಉಹುದ್ ಯುದ್ಧದ ಶಹೀದರಲ್ಲಿ ಓರ್ವ ಗಣ್ಯ ವ್ಯಕ್ತಿ ಮುಸ್‌ಅಬ್ ಬಿನ್ ಉಮೈರ್[ರ] ಆಗಿದ್ದರು. ಇವರು ಮುಹಾಜಿರೀನರಲ್ಲಿ ಮೊದಲ ವ್ಯಕ್ತಿ ಆಗಿದ್ದರು. ಇವರು ಮದೀನದಲ್ಲಿ ಇಸ್ಲಾಮ್ ಧರ್ಮದ ಬೋಧಕರನ್ನಾಗಿ ಆಗಮಿಸಿದ್ದರು. ಅಜ್ಞಾನದ ಕಾಲದಲ್ಲಿ ಹಝ್ರತ್ ಮುಸ್‌ಅಬ್ ಮಕ್ಕದ ಯುವ ಜನರಲ್ಲಿ ಎಲ್ಲರಿಗಿಂತಲೂ ಹೆಚ್ಚು ಉತ್ತಮ ಪೋಷಾಕುಧಾರಿ ತರುಣರಾಗಿದ್ದರು. ಅವರು ಬಹಳ ಐಶ್ವರ್ಯದಲ್ಲಿ ಜೀವಿಸುತ್ತಿದ್ದರು. ಮುಸ್ಲಿಮರಾದ ನಂತರ ಅವರ ಸ್ಥಿತಿ ಸಂಪೂರ್ಣವಾಗಿ ಬದಲಾವಣೆ ಗೊಂಡಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಒಮ್ಮೆ ಕಂಡಾಗ ಅವರ ಬಟ್ಟೆಗಳಲ್ಲಿ ಅನೇಕ ತೇಪೆ ಹಾಕಲಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹಝ್ರತ್ ಮುಸ್‌ಅಬ್‌ರ ಹಿಂದಿನ ಕಾಲ ನೆನಪಿಗೆ ಬಂದಾಗ ಅವರ ಕಣ್ಣುಗಳು ಅಶ್ರುಭರಿತವಾದುವು. ಉಹುದ್ ಯುದ್ಧದಲ್ಲಿ ಹಝ್ರತ್ ಮುಸ್‌ಅಬ್ ಶಹೀದರಾದಾಗ ಅವರ ಶರೀರವನ್ನು ಮರೆ ಮಾಡುವಷ್ಟು ಬಟ್ಟೆ ಇರಲಿಲ್ಲ. ಮುಖವನ್ನು ಮುಚ್ಚಿದಾಗ ಕಾಲು ಬರಿದಾಗುತ್ತಿತ್ತು. ಕಾಲುಗಳನ್ನು ಮುಚ್ಚಿದಾಗ ತಲೆ ಬರಿದಾಗುತ್ತಿತ್ತು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆ ಪ್ರಕಾರ ತಲೆ ಮುಚ್ಚುವ ಹಾಗೆ ಚಾದರವನ್ನು ಹೊದಿಸಿ ಕಾಲುಗಳ ಮೇಲೆ ಹುಲ್ಲು ಹಾಕಿ ಮರೆಮಾಡಲಾಗಿತ್ತು. (ಸೀರತ್ ಖಾತುಮುನ್ನಬೀಯೀನ್, ಮಿರ್ಝಾ ಬಶೀರ್ ಅಹ್ಮದ್ ಸಹೆಬ್, ಪುಟ-501)

ಸಹೀಹ್ ಬುಖಾರಿಯಲ್ಲಿ ಒಂದು ವರದಿ ಈ ರೀತಿ ಇದೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ರಝಿಯಲ್ಲಾಹಿ ಅನ್ಹು ಅವರ ಮುಂದೆ ಇಫ್‌ತಾರ್ ಸಮಯದಲ್ಲಿ ಭೋಜನ ತರಲಾಯಿತು ಅವರು ಉಪವಾಸ ನಿರ್ವಹಿಸುತ್ತಿದ್ದರು. ಅವರು ಹೇಳಿದರು ಮುಸ್‌ಅಬ್ ಬಿನ್ ಉಮೈರ್[ರ] ಶಹೀದರಾದರು ಅವರು ನನಗಿಂತ ಉತ್ತಮರಾಗಿದ್ದರು. ಅವರನ್ನು ಒಂದೇ ಬಟ್ಟೆಯಲ್ಲಿ ದಫನ್ ಮಾಡಲಾಯಿತು. ಅವರ ಮುಖವನ್ನು ಮುಚ್ಚಿದಾಗ ಕಾಲು ಬರಿದಾಗುತ್ತಿತ್ತು, ಕಾಲನ್ನು ಮುಚ್ಚಿದಾಗ ಮುಖವು ಬರಿದಾಗುತ್ತಿತ್ತು. ವರದಿಗಾರರು ಹೇಳುತ್ತಾರೆ: ನನ್ನ ಪ್ರಕಾರ ಅವರು ಹೀಗೂ ಸಹ ಹೇಳಿದ್ದರು ಹಮ್‌ಝ ಸಹ ಶಹೀದರಾದರು ಅವರು ನನಗಿಂತ ಉತ್ತಮರಾಗಿದ್ದರು. ಅನಂತರ ಅವರು ಹೇಳಿದರು ನಮಗೆ ಲೋಕದಲ್ಲಿ ಬಹಳ ಆರಮದಾಯಕ ಜೀವನವನ್ನು ನೀಡಲಾಯಿತು. ನಮಗೆ ಭಯವಿರುವುದೇನೆಂದರೆ ನಮ್ಮ ಒಳಿತಿನ ಪ್ರತಿಫಲವನ್ನು ಈ ಲೋಕದಲ್ಲಿಯೇ ನೀಡಲಾಗುತ್ತಿದೆಯೋ ಎಂಬುವುದು. ಅನಂತರ ಅವರು ಅಳತೊಡಗಿದರು ಊಟವನ್ನು ಸಹ ತಿನ್ನುವುದನ್ನು ಬಿಟ್ಟರು. (ಸಹೀಹ್ ಬುಖಾರಿ ಕಿತಾಬುಲ್ ಜನಾಎಝ್ ಹದೀಸ್-1275)

ಅಲ್ಲಾಹನ ಭಯ ಅವರ ಮೇಲೆ ಆವರಿಸಿತು. ಅವರು ಭಯಭೀತರಾದರು ಅವರ ಮುಂದೆ ಪರಲೋಕದಲ್ಲಿ ಅಲ್ಲಾಹನ ವರ್ತನೆ ನೆನಪಾಯಿತು ಆದ್ದರಿಂದ ಅವರು ಭಾವುಕರಾದರು. ಎಲ್ಲಾ ಆರಾಮತಿಯು ನಮಗೆ ಈ ಲೋಕದಲ್ಲಿ ಸಿಗಲಿದೆಯೋ ಎಂದು.

ಹಝ್ರತ್ ಖಬ್ಬಾಬ್ ಬಿನ್ ಅರತ್[ರ] ವರದಿ ಮಾಡುತ್ತಾರೆ: ನಾವು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗೆ ದೇಶವನ್ನು ತ್ಯಜಿಸಿದೆವು. ಅಲ್ಲಾಹನ ಒಪ್ಪಿಗೆಯನ್ನು ನಾವು ಬಯಸುತ್ತಿದ್ದೆವು. ನಮ್ಮ ಪ್ರತಿಫಲವು ಅಲ್ಲಾಹನಲ್ಲಿದೆ. ನಮ್ಮಲ್ಲಿ ಮೃತರಾದ ಅನೇಕರಿದ್ದರು ಅವರು ತಮ್ಮ ಪ್ರತಿಫಲದಿಂದ ಏನು ಗಳಿಸಲಿಲ್ಲ. ಅವರಲ್ಲಿ ಹಝ್ರತ್ ಮುಸಅಬ್[ರ] ಅವರು ಒಬ್ಬರಾಗಿದ್ದರು ಮತ್ತು ನಮ್ಮಲ್ಲಿ ಇನ್ನು ಕೆಲವರ ಫಲವು ಹಣ್ಣಾಗಿತ್ತು ಅವರು ಅದನ್ನು ಆರಿಸಿಕೊಳ್ಳುತ್ತಿದ್ದರು. ಹಝ್ರತ್ ಮುಸ್‌ಅಬ್ ಬಿನ್ ಉಮೈರ್[ರ] ಉಹುದ್ ದಿವಸ ಶಹೀದರಾದರು ಅವರ ಕಫನ್‌ಗೋಸ್ಕರ ನಮಗೆ ಕೇವಲ ಒಂದೇ ಬಟ್ಟೆ ದೊರೆಯಿತು. ನಾವು ಅವರ ಮುಖವನ್ನು ಮುಚ್ಚಿದಾಗ ಅವರ ಕಾಲು ಬರಿದಾಗುತ್ತಿತ್ತು ಅದೇ ರೀತಿ

ನಾವು ಅವರ ಕಾಲನ್ನು ಮುಚ್ಚಿದಾಗ ಅವರ ಮುಖ ಬರಿದಾಗುತ್ತಿತ್ತು ಆದ್ದರಿಂದ ರಸೂಲುಲ್ಲಾಹ್(ಸ) ನಮಗೆ ಅವರ ಮುಖವನ್ನು ಮುಚ್ಚಲು ಮತ್ತು ಕಾಲುಗಳ ಮೇಲೆ ಹುಲ್ಲು ಹಾಕಿ ಮರೆಮಾಡಲು ಉಪದೇಶಿಸಿದರು. (ಸಹೀಹ್ ಬುಖಾರಿ ಕಿತಾಬುಲ್ ಜನಾಎಝ್, ಹದೀಸ್–1276)

ತಿರ್ಮಿಝಿಯ ಒಂದು ವರದಿ ಹೀಗಿದೆ: ಹಝ್ರತ್ ಅಲಿ ಬಿನ್ ಅಬೂ ತಾಲಿಬ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಪ್ರತಿಯೊಬ್ಬ ಪ್ರವಾದಿಗೆ ಏಳು ನಖೀಬ್‌ಗಳನ್ನು ಅಲ್ಲಾಹನು ದಯಪಾಲಿಸಿದ್ದಾನೆ. ಆದರೆ ನನಗೆ ಹದಿನಾಲ್ಕು ನಖೀಬ್‌ಗಳಿದ್ದಾರೆ. ಆ ನಖೀಬ್‌ಗಳು ಯಾರೆಲ್ಲಾ ಎಂದು ಸಹಾಬರು ಕೇಳಿದಾಗ ಹೇಳಿದರು: ನನ್ನ ಪುತ್ರಿಯರ ಮಕ್ಕಳಾದ ಜಅ್‌ಫರ್ ಮತ್ತು ಹಮ್‌ಝ, ಅಬೂಬಕರ್, ಉಮರ್, ಮುಸ್‌ಅಬ್ ಬಿನ್ ಉಮೈರ್, ಬಿಲಾಲ್, ಸಲ್ಮಾನ್, ಮಿಖ್‌ದಾದ್, ಅಬೂಝರ್, ಅಮ್ಮಾರ್, ಅಬ್ದುಲ್ಲಾ ಬಿನ್ ಮಸ್‌ಊದ್. (ಸನನ್ ತಿರ್ಮಿಝಿ, ಅಬ್ವಾಬುಲ್ ಮುನಾಖಿಬ್ ಹದೀಸ್–3785)

ಹಝ್ರತ್ ಆಮಿರ್ ಬಿನ್ ರಬೀಅ ವರದಿ ಮಾಡುತ್ತಾರೆ: ನನ್ನ ಪಿತ ಹೇಳುತ್ತಾ ಇದ್ದರು, ಹಝ್ರತ್ ಮುಸ್‌ಅಬ್ ಬಿನ್ ಉಮೈರ್‌ರಿಗಿಂತ ಹೆಚ್ಚು ಸುಸ್ವಭಾವಿಯಾದ ಮತ್ತು ಅವರಿಗಿಂತ ಕಡಿಮೆ ಭಿನ್ನಾಭಿಪ್ರಾಯ ಪ್ರಕಟಿಸುವ ಬೇರೆ ಯಾರನ್ನೂ ನಾನು ಕಂಡಿಲ್ಲ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–87, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಹುದ್ ಯುದ್ಧದ ನಂತರ ಮದೀನಕ್ಕೆ ಮರಳಿದಾಗ ಹಝ್ರತ್ ಮುಸ್‌ಅಬ್ ಬಿನ್ ಉಮೈರರ ಪತ್ನಿ ಹಝ್ರತ್ ಹಮ್‌ನ ಬಿನ್ತ್ ಜುಹ್‌ಶ್ ಅವರನ್ನು ಬೇಟಿಯಾಗಲು ಬಂದರು. ಜನರು ಆಗ ಆಕೆಯ ಸಹೋದರ ಹಝ್ರತ್ ಅಬ್ದುಲ್ಲಾ ಬಿನ್ ಜುಹ್‌ಶ್ ಶಹೀದರಾದ ಬಗ್ಗೆ ತಿಳಿಸಿದರು. ಆಗ ಆ ಮಹಿಳೆ **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್** ಉಚ್ಚರಿಸಿ ಅವರಿಗೋಸ್ಕರ ಮಗ್‌ಫಿರತಿನ ಪ್ರಾರ್ಥನೆ ಮಾಡಿದರು. ಅನಂತರ ಆಕೆಯ ಸೋದರಮಾವ ಹಝ್ರತ್ ಹಂಝ ಶಹೀದರಾದ ಬಗ್ಗೆ ಹೇಳಿದಾಗ ಆ ಮಹಿಳೆ **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್** ಉಚ್ಚರಿಸಿ ಮೃತರಿಗೋಸ್ಕರ ಮಗ್‌ಫಿರತಿನ ಪ್ರಾರ್ಥನೆ ಮಾಡಿದರು. ಅನಂತರ ಜನರು ಆಕೆಯ ಪತಿ ಹಝ್ರತ್ ಮುಸ್‌ಅಬ್ ಶಹೀದರಾದ ಬಗ್ಗೆ ತಿಳಿಸಿದಾಗ ಆ ಮಹಿಳೆ ಅಳಲು ಪ್ರಾರಂಭಿಸಿದರು ಮತ್ತು ಗಾಬರಿಗೊಂಡರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಮಹಿಳೆಗೆ ತನ್ನ ಪತಿಯ ಬಗ್ಗೆ ಒಂದು ವಿಶಿಷ್ಟವಾದ ಸ್ಥಾನ ಮತ್ತು ಪದವಿ ಇದೆ. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್ ಪುಟ–396, ದಾರ್ ಇಬ್ನೆ ಜಝುಮ್ ಬೈರೂತ್ 2009)

ಇನ್ನೊಂದು ವರದಿ ಹೀಗಿದೆ ಹಝ್ರತ್ ಹಮ್‌ನ ಬಿನ್ತ್ ಜಹಶ್ ಅವರ ಬಗ್ಗೆ ಪ್ರಸ್ತಾವನೆ ಸಿಗುತ್ತದೆ, ಅವರನ್ನು ಜನರು ಆಕೆಯ ಸಹೋದರ ಶಹೀದರಾದರು ಎಂದು ತಿಳಿಸಿದಾಗ ಆಗ ಆ ಮಹಿಳೆ **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್** ಉಚ್ಚರಿಸಿ ಅವರಿಗೋಸ್ಕರ ಮಗ್‌ಫಿರತಿನ ಪ್ರಾರ್ಥನೆ ಮಾಡಿದರು. ಅನಂತರ ಜನರು ಆಕೆಯ ಪತಿ ಹಝ್ರತ್ ಮುಸ್‌ಅಬ್ ಶಹೀದರಾದ ಬಗ್ಗೆ ತಿಳಿಸಿದಾಗ ಆ ಮಹಿಳೆ ಅಳಲು ಪ್ರಾರಂಭಿಸಿದರು ಮತ್ತು ಗಾಬರಿಗೊಂಡರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಮಹಿಳೆಗೆ ತನ್ನ ಪತಿಯ ಬಗ್ಗೆ ಒಂದು ವಿಶಿಷ್ಟವಾದ ಸ್ಥಾನ ಮತ್ತು ಪದವಿ ಇದೆ. (ಸನನ್ ಇಬ್ನೆ ಮಾಜ ಕಿತಾಬುಲ್ ಜನಾಎಝ್ ಹದೀಸ್–1590)

ಈ ಘಟನೆಯನ್ನು ಹಝ್ರತ್ ಖಲೀಫತುಲ್ ಮಸೀಹ್ ರಬಿ(ರ) ತಮ್ಮ ಶೈಲಿಯಲ್ಲಿ ವಿವರಿಸಿದ್ದಾರೆ ಅವರು ಹೇಳುತ್ತಾರೆ: ಸಹಾಬರವರ ಒಂದಕ್ಕಿಂತ ಹೆಚ್ಚು ಸಂಬಂಧಿಕರು ಶಹೀದರಾದಾಗ ಅವರನ್ನು ಒಂದೇ ಬಾರಿಗೆ ಎಲ್ಲರ ಬಗ್ಗೆ ತಿಳಿಸುತ್ತಿರಲಿಲ್ಲ ಕ್ರಮೇಣ ಒಂದಾದ ಮೇಲೆ ಇನ್ನೊಂದು ಹೇಳುತ್ತಿದ್ದರು. ಹೀಗೆ ಒಮ್ಮೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮುಂದೆ ಹಝ್ರತ್ ಅಬ್ದುಲ್ಲ ಅವರ ಸಹೋದರಿ ಹಝ್ರತ್ ಹಮ್‌ನ ಬಿನ್ತ್ ಜಹಶ್ ಹಾಜರಾದರು ಆಗ ರಸೂಲುಲ್ಲಾಹ್(ಸ) ಹೇಳಿದರು. ಹಮ್‌ನ! ನೀನು ತಾಳ್ಮೆಯಿಂದಿರು ಮತ್ತು ಅಲ್ಲಾಹನಿಂದ ಒಳಿತನ್ನು ಬಯಸು ಎಂದರು ಆಗ ಆಕೆ ಹೇಳಿದಳು ಎಲೈ ಪ್ರವಾದಿ ವರ್ಯರೇ! ಎಂತಹ ಒಳಿತು? ಇದಕ್ಕೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಹೇಳಿದರು ನಿನ್ನ ಸಹೋದರ ಮಾವರವರ. ಆಗ ಹಝ್ರತ್ ಹಮ್ನ ಹೇಳಿದರು **ಇನ್ನಾಲಿಲ್ಲಾಹಿ ವಿನ್ನಾ ಇಲೈಹಿ ರಾಜಿಊನ್– ಗಫರ ಲಹು ವ ರಹ್‌ಮಹು ಹನೀಯ್ಯನ್ ಲಹುಶ್ಶಹಾದ.** ಅನಂತರ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು. ಹಮ್‌ನ! ನೀನು ತಾಳ್ಮೆಯಿಂದಿರು ಮತ್ತು ಅಲ್ಲಾಹನಿಂದ ಒಳಿತನ್ನು ಬಯಸು ಎಂದರು ಆಗ ಆಕೆ ಹೇಳಿದಳು ಎಲೈ ಪ್ರವಾದಿ ವರ್ಯರೇ! ಎಂತಹ ಒಳಿತು? ಇದಕ್ಕೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಹೇಳಿದರು ನಿನ್ನ ಸಹೋದರ ಅಬ್ದುಲ್ಲಾರವರ. ಆಗ ಹಝ್ರತ್ ಹಮ್ನ ಹೇಳಿದರು **ಇನ್ನಾಲಿಲ್ಲಾಹಿ ವಿನ್ನಾ ಇಲೈಹಿ ರಾಜಿಊನ್– ಗಫರ ಲಹು ವ ರಹ್‌ಮಹು ಹನೀಯ್ಯನ್ ಲಹುಶ್ಶಹಾದ.** ಅನಂತರ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು. ಹಮ್‌ನ! ನೀನು ತಾಳ್ಮೆಯಿಂದಿರು ಮತ್ತು ಅಲ್ಲಾಹನಿಂದ ಒಳಿತನ್ನು ಬಯಸು ಎಂದರು ಆಗ ಆಕೆ ಹೇಳಿದಳು ಎಲೈ ಪ್ರವಾದಿ ವರ್ಯರೇ! ಎಂತಹ ಒಳಿತು? ಇದಕ್ಕೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಹೇಳಿದರು ಮುಸ್‌ಅಬ್ ಬಿನ್ ಉಮೈರ್(ರ) ಅವರಿಗೆ. ಅದಕ್ಕೆ ಹಮ್‌ನ ಹೇಳಿದರು ಅಕಟಾ! ಇದನ್ನು ಆಲಿಸಿದ ನಂತರ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ನಿಜವಾಗಿಯು ಪತಿಯ ಹಕ್ಕು ಪತ್ನಿಯ ಮೇಲೆ ಇದೆ. ಆಕೆಗೆ ಕೇಳಲಾಯಿತು ನೀನು ಇಂತಹ ಪದಗಳನ್ನು ಏಕೆ ಉಪಯೋಗಿಸಿದೆ ಎಂದು ಆಗ ಆಕೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಹೇಳಿದಳು ಎಲೈ ಪ್ರವಾದಿ ವರ್ಯರೇ! ನನಗೆ ನನ್ನ ಮಕ್ಕಳ ಅನಾಥರಾಗಿದ್ದ ಬಗ್ಗೆ ನೆನಪಾಗಿ ಹೀಗೆ ನನ್ನ ಬಾಯಿಯಿಂದ ಪದಗಳ ಉಚ್ಚರಿಸಿದೆ. ಇದನ್ನು ಆಲಿಸಿ ರಸೂಲುಲ್ಲಾಹ್ ಅಲ್ಲಲ್ಲಾಹು ಅಲೈಹಿವಸಲ್ಲಮರು ಮುಸ್‌ಅಬ್(ರ) ಅವರ ಮಕ್ಕಳಿಗಾಗಿ ಪ್ರಾರ್ಥಿಸಿದರು: ಎಲೈ ಅಲ್ಲಾಹನೇ! ಇವರ ಪೋಷಕರ ಮೇಲೆ ಹಾಗೂ ಹಿರಿಯರ ಮೇಲೆ ಕರುಣೇ ತೋರಿಸು ಮತ್ತು ಅವರಿಗೆ ಉತ್ತಮ ಪ್ರತಿಫಲ ನೀಡು ಎಂದರು. (ಖುತ್‌ಬಾತೆ ತಾಹಿರ್, ಖಿಲಾಫತ್, ಪುಟ–363)

ಅನಂತರ ಅಲ್ಲಾಹನು ಅವರೊಂದಿಗೆ ಉತ್ತಮವಾಗಿ ವರ್ತಿಸಿದನು. ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಪ್ರಾರ್ಥನೆ ಸ್ವೀಕರಿಸಲಾಯಿತು. ಹಝ್ರತ್ ಮುಸ್‌ಅಬ್‌ರ ಬಗ್ಗೆ ವಿವರಣೆ ಇಲ್ಲಿಗೆ ಮುಕ್ತಾಯವಾಯಿತು. ಇನ್‌ಶಾಅಲ್ಲಾಹ್ ಮುಂದೆ ಇನ್ನೊಬ್ಬ ಸಹಾಬಿಯ ಬಗ್ಗೆ ಪ್ರಸ್ತಾಪಿಸಲಾಗುವುದು.

ಈಗ ನಾನು ಇಂದಿನ ಕಾಲದಲ್ಲಿ ಹಬ್ಬಿರುವ ಕರೋನಾ ವೈರಸ್‌ಗೆ ಸಂಬಂಧಿಸಿದ ಸಾಂಕ್ರಾಮಿಕ ರೋಗದ ಬಗ್ಗೆ ನಿಮ್ಮ ಗಮನ ಹರಿಸುವೆನು. ಸರಕಾರಗಳು ಮತ್ತು ಸರಕಾರದ ಆಡಳಿತೆ ವಿಭಾಗಗಳು ಪ್ರಕಟಿಸುತ್ತಿರುವ ಮುಂಜಾಗ್ರತೆಯ ಕ್ರಮಗಳನ್ನು ನಾವೆಲ್ಲರೂ ಅನುಷ್ಠಾನ ಮಾಡಬೇಕು. ಹೋಮಿಯೋಪಥಿ ಡಾಕ್ಟರ್‌ಗಳಿಂದ ಸಲಹೆ ಪಡೆದು ಕೆಲವು ಹೋಮಿಯೋಪಥಿ ಔಷಧಿಗಳನ್ನು ನಾನು ಆರಂಭದಲ್ಲಿಯೇ ಸೂಚಿಸಿದ್ದೆನು. ಅವುಗಳಲ್ಲಿ ಕೆಲವು ರೋಗ ಪ್ರತಿರೋಧಕ್ಕೋಸ್ಕರ ಮತ್ತು ಬೇರೆ ಕೆಲವು ರೋಗ ಚಿಕಿತ್ಸೆಗೋಸ್ಕರವಾಗಿವೆ. ಅಲ್ಲಾಹನು ಅವುಗಳಲ್ಲಿ ರೋಗೋಪಶಮನವನ್ನು ಇರಿಸುವವನಾಗಲಿ. ಅವುಗಳನ್ನು ಬಳಸಬೇಕು. ಆದರೆ ಅವುಗಳೊಂದಿಗೆ ಮುಂಜಾಗ್ರತೆ ಕ್ರಮಗಳನ್ನು ಸಹ ಕೈಗೊಳ್ಳಬೇಕಾದುದು ಅವಶ್ಯವಾಗಿದೆ. ಅವುಗಳ ಬಗ್ಗೆ ಪ್ರಕಟಿಸಲಾಗುತ್ತವೆ.

ಜನರು ಜಮಾಯಿಸುವುದರಿಂದ ರಕ್ಷಿಸಿಕೊಳ್ಳಬೇಕು. ಮಸ್‌ಜಿದ್‌ಗೆ ಆಗಮಿಸುವವರು ಸಹ ಜಾಗ್ರತೆ ವಹಿಸಬೇಕು. ಸ್ವಲ್ಪ ಮಾತ್ರ ಜ್ವರವಿದ್ದರೂ ಶರೀರ ಬಲಹೀನತೆ ಅನುಭವಿಸುತ್ತಿರುವುದಾದರೂ ಸೀನು ಬರುತ್ತಿದ್ದರೂ ಅಥವಾ ನೆಗಡಿ ಆಗಿದ್ದರೂ ಮಸ್‌ಜಿದ್‌ಗೆ ಬರಬಾರದು. ಮಸ್‌ಜಿದ್‌ಗೆ ಸಹ ಕೆಲವು ಹಕ್ಕುಗಳಿವೆ. ಅನ್ಯರಿಗೆ ಹರಡುವ ಸಾಧ್ಯತೆ ಇರುವ ರೋಗಬಾಧಿತರಾದವರು ಮಸ್‌ಜಿದ್‌ಗೆ ಆಗಮಿಸುವ ಬಗ್ಗೆ ಬಹಳ ಜಾಗ್ರತೆ ವಹಿಸಬೇಕು. ಇಂದಿನ ಕಾಲದಲ್ಲಿ ಪ್ರತಿಯೊಬ್ಬರು ಸೀನುವಾಗ ಕೈಯಿಂದ ಅಥವಾ ಕರವಸ್ತ್ರದಿಂದ ಮುಖವನ್ನು ಮುಚ್ಚಬೇಕು. ಇಂದಿನ ಕಾಲದಲ್ಲಿ ಇದರ ಬಗ್ಗೆ ಬಹಳ ಶ್ರದ್ಧೆ ನೀಡಬೇಕಾದ ಆವಶ್ಯಕತೆಯಿದೆ. ಡಾಕ್ಟರ್‌ಗಳು ಹೇಳುವ ಮುಂಜಾಗ್ರತೆ ಕ್ರಮಗಳು ಇವುಗಳಾಗಿವೆ: ಕೈಯನ್ನೂ ಮುಖವನ್ನೂ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ಕೈಯಲ್ಲಿ ಕೊಳೆ ಇದ್ದರೆ ಮುಖಕ್ಕೆ ಕೈ ತಗಲಿಸಬಾರದು. ಕೈಗಳಿಗೆ ಸ್ಯಾನಿಟೈಸರ್ ಹಚ್ಚಬೇಕು ಅಥವಾ ತೊಳೆಯುತ್ತಾ ಇರಬೇಕು. ಮುಸ್ಲಿಮರಾದ ನಾವು ಐದು ಹೊತ್ತಿನ ನಮಾಝ್‌ಗೋಸ್ಕರ ಐದು ಹೊತ್ತು ಕ್ರಮಬದ್ಧವಾಗಿ ವುಝು ಮಾಡುತ್ತಾ ಇದ್ದರೆ, ಮೂಗಿನೊಳಗೆ ನೀರು ಹಾಯಿಸಿ ಮೂಗನ್ನು ಸಹ ಸ್ವಚ್ಛವಾಗಿ ಇರಿಸುವುದಾದರೆ ಇದು ಸ್ವಚ್ಛತೆ ಕಾಪಾಡುವ ಅತ್ಯುತ್ತಮ ವಿಧಾನವಾಗಿದೆ. ಸ್ಯಾನಿಟೈಸರ್‌ನ ಕೊರತೆ ಅದು ನಿವಾರಿಸುವುದು. ಒಟ್ಟಾರೆ ಹೇಳುವುದಾದರೆ ಸರಿಯಾದ ರೀತಿಯಲ್ಲಿ ವುಝು ಮಾಡುವುದಾದರೆ ಬಾಹ್ಯ ಶುದ್ಧಿ ಆಗುವುದು. ವುಝು ಮಾಡುವ ಮನುಷ್ಯ ನಮಾಝ್ ಸಹ ಮಾಡುವಾಗ ಅದು ಆಧ್ಯಾತ್ಮಿಕ ಸ್ವಚ್ಛತೆಯ ಮಾರ್ಗ ಸಹ ಆಗುವುದು. ಇಂದಿನ ಕಾಲದಲ್ಲಿ ಪ್ರಾರ್ಥನೆ ಬಹಳ ಆವಶ್ಯಕವಾಗಿದೆ. ಆದುದರಿಂದ ನಾವು ಅದರ ಕಡೆಗೆ ವಿಶಿಷ್ಟವಾಗಿ ಲಕ್ಷ್ಯ ನೀಡಬೇಕು. ಮಸ್‌ಜಿದ್‌ಗಳ ಹಕ್ಕುಗಳ ಬಗ್ಗೆ ನಾನು ಪ್ರಸ್ತಾಪಿಸಿದ್ದೇನೆ. ಇನ್ನೊಂದು ವಿಷಯ ಹೇಳಲು ವಿಶಿಷ್ಟವಾಗಿ ಬಯಸುತ್ತೇನೆ. ಶೈತ್ಯ ಕಾಲದಲ್ಲಿಯೂ ಬೇರೆ ಸಮಯಗಳಲ್ಲೂ ಮಸ್‌ಜಿದ್‌ಗೆ ಕಾಲು ಚೀಲಗಳನ್ನು ಧರಿಸಿ ಬರುವವರು ಪ್ರತಿದಿನ ಅವುಗಳನ್ನು ಬದಲಾಯಿಸಿ ತೊಳೆಯ ಬೇಕು. ಕಾಲು ಚೀಲಗಳಿಂದ ದುರ್ವಾಸನೆ ಬರುತ್ತಿದ್ದರೆ ಜೊತೆಗೆ ನಿಂತು ನಮಾಝ್ ಮಾಡುವವರಿಗೆ ಮತ್ತು ಹಿಂಬಾಗದ ಸಾಲಿನಲ್ಲಿ ಸಜ್‌ದ ಮಾಡುವವರಿಗೆ ಕಷ್ಟವಾಗುತ್ತದೆ. ಇದರ ಬಗ್ಗೆ ಜಾಗ್ರತೆ ವಹಿಸಬೇಕು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಜ್ಞಾಪಿಸಿದ್ದಾರೆ, ಬೆಳ್ಳುಳ್ಳಿ, ನೀರುಳ್ಳಿ ಮೊದಲಾದ ವಾಸನೆ ಬೀರುವ

ವಸ್ತುಗಳನ್ನು ತಿಂದು ಮಸ್‌ಜಿದ್‌ಗೆ ಬರಬಾರದು ಎಂದು. (ಸನನ್ ಅಬೂ ದಾಊದ್ ಕಿತಾಬುಲ್ ಅತ್‌ಇಮ, ಬಾಬ್ ಫೀ ಕುಲ್ಲಿ ಚೌಮ್ ಹದೀಸ್–3823)

ಮಸ್‌ಜಿದ್‌ಗೆ ಆಗಮಿಸುವಾಗ ಸುವಾಸನೆಯ ವಸ್ತು ಬಟ್ಟೆಗೆ ತಾಗಿಸಿಕೊಂಡು ಬರಬೇಕೆಂದು ಸಹ ಆಜ್ಞಾಪಿಸಲಾಗಿದೆ. (ಸಹೀಹ್ ಬುಖಾರಿ ಕಿತಾಬುಲ್ ಜುಮುಅ, ಹದೀಸ್–883) ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಸಹ ಹೇಳಿದ್ದಾರೆ, ಹಸಿ ಮಾಂಸ ತೆಗೆದುಕೊಂಡು ಮಸ್‌ಜಿದ್‌ನೊಳಗೆ ದಾಟಿ ಹೋಗಬಾರದು ಎಂದು. ಹಾಗಿರುವಾಗ ಅಲ್ಲಿ ಹಸಿಮಾಂಸ ತಂದು ಕುಳಿತುಕೊಳ್ಳುವ ಪ್ರಶ್ನೆಯೇ ಬರುವುದಿಲ್ಲ. (ಸನನ್ ಇಬ್ನೆ ಮಾಜ ಬಾಬುಲ್ ಮಸಾಜಿದ್, ಹದೀಸ್–748) ಹೀಗೆ ದೈಹಿಕ ಶುದ್ಧತೆಯೊಂದಿಗೆ ಪರಿಸರದ ಶುದ್ಧತೆಯು ಓರ್ವ ನಮಾಝಿ ಮಾಡುವವರ ಹೊಣೆಗಾರಿಕೆ ಆಗಿದೆ. ಇವುಗಳ ಬಗ್ಗೆ ಶ್ರದ್ಧೆ ನೀಡಬೇಕು. ಆದರೆ ಈ ನೆವನಗಳಿಂದ ಮಸ್‌ಜಿದ್‌ಗೆ ಬರುವುದನ್ನು ನಿಲ್ಲಿಸಬಾರದು. ಜನರು ತಮ್ಮ ಬಾಹ್ಯ ಸ್ಥಿತಿಯನ್ನು ನೋಡಿ ಹೃದಯದ ಫತ್ವ ಪಡೆದುಕೊಳ್ಳಬೇಕು. ನೆನಪಿನಲ್ಲಿರಿಸಿರಿ, ಅಲ್ಲಾಹನು ಹೃದಯಗಳ ಸ್ಥಿತಿ ತಿಳಿದುಕೊಳ್ಳುತ್ತಾನೆ. ಆದುದರಿಂದ ಯಾರಾದರೂ ರೋಗಿಯಾಗಿದ್ದರೆ ಡಾಕ್ಟರ್‌ಗಳನ್ನು ಕಂಡು ಅದು ಯಾವ ರೋಗವೆಂದು ತಿಳಿದುಕೊಳ್ಳಿರಿ. ಒಂದೆರಡು ದಿನ ಮಸ್‌ಜಿದ್‌ಗೆ ಬಾರದಿರುವುದು ಉತ್ತಮವಾಗಿದೆ.

ಹಸ್ತದಾನದಿಂದ ಸ್ನೇಹ ಸಂಬಂಧ ವರ್ಧಿಸುತ್ತದೆಯಾದರೂ ಇಂದಿನ ಕಾಲದಲ್ಲಿ ಈ ಹೊಸ ರೋಗದ ಕಾರಣ ಅದನ್ನು ಮಾಡದಿರುವುದೇ ಉತ್ತಮವಾಗಿದೆ. ಅಲ್ಲಾಹನ ಆಜ್ಞೆ ಬಗ್ಗೆ ಅನ್ಯರಿಗೆ ಭಿನ್ನಾಭಿಪ್ರಾಯವಿತ್ತು. ನಾವು ಬಹಳ ಪ್ರೀತಿಯಿಂದ ಹೇಳುತ್ತಿದ್ದೆವು ಮಹಿಳೆಯರಿಗೆ ಹಸ್ತದಾನ ಮಾಡುವುದರ ಬಗ್ಗೆ ನಮ್ಮನ್ನು ತಡೆಯಲಾಗಿದೆ ಎಂದು. ಅದರ ಬಗ್ಗೆ ಅವರು ಬಹಳ ಆಕ್ಷೇಪಿಸುತ್ತಿದ್ದರು. ಈಗ ತಿಳಿದು ಬರುವುದೇನೆಂದರೆ ಸರಕಾರಿ ಕಚೇರಿಗಳಲ್ಲಿ ಮಾತ್ರವಲ್ಲ ವಿವಿಧ ಸ್ಥಳಗಳಲ್ಲಿಯೂ ಅನ್ಯರು ಹಸ್ತದಾನ ಮಾಡುವುದನ್ನು ನಿರಾಕರಿಸುತ್ತಾರೆ. ಬಹಳ ಒರಟಾಗಿ ಸಹ ನಿರಾಕರಿಸುತ್ತಾರೆ. ಈ ಸಾಂಕ್ರಮಿಕ ರೋಗ ಸ್ವಲ್ಪ ಮಟ್ಟಿಗೆ ಅವರನ್ನು ಈ ರೀತಿ ಸುಧಾರಣೆ ಮಾಡಿತು. ಈ ಸುಧಾರಣೆ ಅವರನ್ನು ಅಲ್ಲಾಹನ ಸಾಮೀಪ್ಯಗಳಿಸುವ ಕಡೆಗೆ ಒಯ್ಯುವಂತಾಗಲಿ. ಈ ಸಾಂಕ್ರಾಮಿಕ ರೋಗ ಎಷ್ಟು ಹಬ್ಬಲಿದೆ ಎಂದು ಅಲ್ಲಾಹನಿಗೆ ಮಾತ್ರ ತಿಳಿದಿದೆ. ಅದು ಎಷ್ಟು ವ್ಯಾಪಿಸಲಿದೆ ಎಂದು ಅವನಿಗೆ ಮಾತ್ರ ತಿಳಿದಿದೆ. ಅಲ್ಲಾಹನ ವಿಧಿ ನಿರ್ಣಯ ಏನಿದೆ ಎಂದು ತಿಳಿಯದು. ಈ ರೋಗ ಅಲ್ಲಾಹನ ಅತೃಪ್ತಿಯ ಕಾರಣದಿಂದ ಹರಡುತ್ತಿದೆ. ನಾವು ಈ ಕಾಲದಲ್ಲಿ ನೋಡುತ್ತಿದ್ದೇವೆ, ವಿವಿಧ ಸಾಂಕ್ರಾಮಿಕ ರೋಗಗಳು, ಭೂಕಂಪಗಳು, ಚಂಡಮಾರುತಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ನಂತರ ಬಹಳ ಹೆಚ್ಚಾಗಿ ವರ್ಧಿಸುತ್ತಾ ಇವೆ. ಅಲ್ಲಾಹನ ವಿಧಿ ನಿರ್ಣಯದ ಕೆಟ್ಟ ಪರಿಣಾಮಗಳಿಂದ ರಕ್ಷಣೆ ಪಡೆಯಲು ಅಲ್ಲಾಹನ ಕಡೆಗೆ ತಿರುಗುವುದು ಬಹಳ ಆವಶ್ಯಕವಾಗಿದೆ. ಪ್ರತಿಯೊಬ್ಬ ಅಹ್ಮದಿ ಈ ದಿನಗಳಲ್ಲಿ ಪ್ರಾರ್ಥನೆಗಳ ಕಡೆಗೆ ಬಹಳ ಶ್ರದ್ಧೆ ಹರಿಸಬೇಕಾದುದು ಆವಶ್ಯಕವಾಗಿದೆ. ತಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಉತ್ತಮಪಡಿಸಲು ಶ್ರದ್ಧೆಹರಿಸಬೇಕು. ಲೋಕದ ಜನರಿಗೋಸ್ಕರ ಸಹ ಪ್ರಾರ್ಥಿಸಬೇಕು. ಅಲ್ಲಾಹನು ಅವರಿಗೆ ಸನ್ಮಾರ್ಗದರ್ಶನ ಮಾಡಿಸಲಿ. ಲೋಕದ ಜನರು ಬೌತಿಕ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚಾಗಿ ಮುಳುಗಿರುವುದಕ್ಕೆ ಬದಲಾಗಿ, ತಮ್ಮ ಸೃಷ್ಟಿಕರ್ತನನ್ನು ಮರೆತು ಬಿಡುವುದಕ್ಕೆ ಬದಲಾಗಿ ತಮ್ಮ ಸೃಷ್ಟಿಕರ್ತನಾದ ದೇವನನ್ನು ಗುರುತಿಸುವವರಾಗುವ ಭಾಗ್ಯವನ್ನು ಅಲ್ಲಾಹನು ಅವರಿಗೆ ದಯಪಾಲಿಸಲಿ.

ಅಲ್ಲಾಹನು ಚನ್ನಾಗಿ ಬಲ್ಲವನಾಗಿದ್ದಾನೆ ಈ ಸಾಂಕ್ರಾಮಿಕ ರೋಗವು ಎಷ್ಟರ ಮಟ್ಟಿಗೆ ಮತ್ತು ಎಲ್ಲಿಯ ತನಕ ಹರಡುತ್ತದೆ ಅಲ್ಲಾಹನ ವಿಧಿ ಏನಾಗಿದೆ ಎಂದು. ಈ ರೋಗವು ಅಲ್ಲಾಹನ ಕೋಪದಿಂದ ವ್ಯಕ್ತವಾಗುತ್ತಿದೆ. ಈ ಕಾಲದಲ್ಲಿ ನಾವು ನೋಡುತ್ತಿದ್ದೇವೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಆಗಮನದ ನಂತರ ಅನೇಕ ರೀತಿಯ ರೋಗಗಳು, ಭೂಕಂಪಗಳು ಹೆಚ್ಚಾಗುತ್ತಿವೆ ಆದ್ದರಿಂದ ಅಲ್ಲಾಹನ ಈ ವಿಕೋಪಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ಅಲ್ಲಾಹನ ಕಡೆ ಗಮನ ಹರಿಸಿಕೊಳ್ಳುವುದು ಅವಶ್ಯಕವಾಗಿದೆ. ಪ್ರತಿಯೊಬ್ಬ ಅಹ್ಮದಿಯು ವಿಶೇಶವಾಗಿ ಪ್ರಾರ್ಥನೆಗಳನ್ನು ಮಾಡುತ್ತಿರಬೇಕು ಮತ್ತು ತಮ್ಮ ಆದ್ಯಾತ್ಮಿಕ ಸ್ಥಿತಿಯನ್ನು ಉತ್ತಮ ಗೊಳಿಸುವುದಕ್ಕೆ ಪ್ರಯತ್ನಿಸಬೇಕು. ಇಡೀ ವಿಶ್ವಕ್ಕಾಗಿ ಪ್ರಾರ್ಥಿಸಬೇಕಾಗಿದೆ. ಅಲ್ಲಾಹನು ಅವರಿಗೂ ಸನ್ಮಾರ್ಗ ದಯಪಾಲಿಸಲಿ. ಹೀಗೆ ಲೌಕಿಕ ಜನರು ತಮ್ಮ ಸೃಷ್ಠಿಕರ್ತನನ್ನು ಗುರುತಿಸಿಕೊಳ್ಳುವವರಾಗಲಿ.

ನಾನು ಕೆಲವು ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು. ಮೊದಲನೆಯ ಜನಾಝ ಅಖೀಲ್ ಅಹ್ಮದ್ ಬಟ್‌ರವರ ಪುತ್ರ ಅಝೀಝುಮ್ ತನ್‌ಝೀಲ್ ಅಹ್ಮದ್ ಬಟ್‌ನದಾಗಿದೆ. 2020 ಫೆಬ್ರವರಿ 27ರಂದು ನಿಧನ ಹೊಂದಿದ್ದನು. ನನ್ನ ಪ್ರಕಾರ ಇದು ಶಹಾದತ್ ಆಗಿದೆ. ಆ ಬಾಲಕನನ್ನು ಅವನ ನೆರೆಮನೆಯ ಸ್ತ್ರೀ ಅತಿ ಕ್ರೂರವಾದ ರೀತಿಯಲ್ಲಿ ಹತ್ಯೆ ಮಾಡಿದಳು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅಹ್ಮದಿಯರನ್ನು ಯಾವುದಾದರೂ ನೆವನದಿಂದ ಹತ್ಯೆ ಮಾಡುವುದನ್ನು ಮೌಲ್ವಿಗಳ ಫತ್ವಗಳು ಸುಲಭಗೊಳಿಸಿವೆ. ಈ ಹತ್ಯೆ ಸಹ ಆ ಫತ್ವಗಳ ಪರಿಣಾಮವಾಗಿಯೇ ಆಗಿದೆ. ನಾನು ಈ ಬಾಲಕನನ್ನು ಶಹೀದರೊಂದಿಗೆ ಸೇರಿದವನಾಗಿ ಗಣಿಸುತ್ತೇನೆ. ಹತ್ಯೆಯ ಕಾರಣ ಏನೇ ಆಗಿರಲಿ, ಅದರ ಹಿನ್ನೆಲೆಯಲ್ಲಿ ಅಹ್ಮದಿಯ್ಯತ್ ಬಗ್ಗೆ ದ್ವೇಷ ಇದೆ.

ಈ ಘಟನೆಯ ವಿವರಗಳ ಪ್ರಕಾರ ಅಝೀಝುಮ್ ತನ್‌ಝೀಲ್ ಅಹ್ಮದ್ ಭಟ್ ಅವರ ತಾಯಿ 27 ಫೆಬ್ರವರಿಗೆ ಅವರ ನೆರೆಮನೆಯಲ್ಲಿ ತನ್ನ ಚಿಕ್ಕ ಸಹೋದರಿಯ ಗೊಂಬೆ ಅಲ್ಲಿ ಬಿಟ್ಟು ಬಂದಿದ್ದಳು ಅದನ್ನು ತರಲು ಕಳುಹಿಸಿದ್ದರು. ವಿಷಯ ಏನಾಯಿತು ಎಂಬುದು ಅಲ್ಲಾಹನೆ ಬಲ್ಲವನಾಗಿದ್ದಾನೆ. ಒಂದು ದಿವಸ ಮುಂಚೆ ಗೊಂಬೆ ಅವರ ಮನೆಯಲ್ಲಿ ಬಿಟ್ಟು ಬಂದಿದ್ದಳು ಅದನ್ನು ತರಲು ಕಳುಹಿಸಿದ್ದರು. ಬಹಳ ಸಮಯ ಕಳೆದ ನಂತರ ಮಗು ಮನೆಗೆ ಬರಲಿಲ್ಲ ಎಂದು ಅವರು ಸ್ವತಃ ನೆರೆಯವರ ಮನೆಗೆ ವಿಚಾರಿಸಲು ಹೋದರು. ಅದಕ್ಕೆ ಆ ನೆರೆಯ ಸ್ತ್ರೀ ಮಗು ಆಗಲೇ ಹೋಯಿತು ಎಂದು ಹೇಳಿದಳು. ಅದಕ್ಕೆ ಮೃತನಾದ ಮಗುವಿನ ತಾಯಿ ತನ್ನ ಪತಿ ಅಖೀಲ್ ಸಾಹೇಬ್ ಅವರಿಗೆ ಕರೆ ಮಾಡಿ ಮಿಷಯ ತಿಳಿಸಿದರು. ಅವರು ತಕ್ಷಣ ಜಮಾಅತ್ತಿನ ವ್ಯವಸ್ಥಾಪಕರನ್ನು ತಿಳಿಸಿ ಹುಡುಕಾಟ ಪ್ರಾರಂಭಿಸಿದರು ಮತ್ತು ಪೋಲೀಸರಿಗೆ ವಿಷಯ ತಿಳಿಸಿದರು. ತದನಂತರ ಓಣಿಯಲ್ಲಿದ್ದ ಸಿ. ಸಿ. ಟಿವಿಯಲ್ಲಿ ನೋಡಿದಾಗ ಅಲ್ಲಿ ಮಗು ನೆರೆಯ ಮನೆಗೆ ಹೋಗಿದ್ದು ಕಾಣಿಸಿತು. ಆದರೆ ಅಲ್ಲಿಂದ ಹೊರಗೆ ಬರಲಿಲ್ಲ. ಆದ್ದರಿಂದ ಪೋಲೀಸರ ಸಹಾಯದಿಂದ ಅವರ ಮನೆಯನ್ನು ಪರಿಶೀಲಿಸಿದಾಗ ಒಂದು ಪೆಟ್ಟಿಗೆಯಲ್ಲಿ ಮಗುವಿನ ಶವ ಪತ್ತೆ ಆಯಿತು. ಪೋಲೀಸರಿಂದ ತಿಳಿದು ಬಂದ ವಿಷಯವೇನೆಂದರೆ ಕೊಲೆ ಮಾಡಿದ ಮಹಿಳೆಯ ಪತಿ ಪೋಲೀಸರಿಗೆ ಮೊದಲಿಗೆ ಅವನ ಪತ್ನಿ ಮಗುವನ್ನು ಕೊಂದು ಹಾಕಿ ಪೆಟ್ಟಿಗೆಯಲ್ಲಿ ಹಾಕಿದ್ದಾಳೆ ಎಂದು ತಿಳಿಸಿದ್ದನು. ಆ ಮಹಿಳೆಯ ಮನೆಯ ಒಡೆಯನ ಮಗನೊಂದಿಗೆ ಸೇರಿ ಆ ಮಗುವನ್ನು ಕೊಂದು ಹಾಕಿದ್ದೇನೆ ಎಂದು ಒಪ್ಪಿಕೊಂಡಿದ್ದಾಳೆ.

ಅಝೀಝುಮ್ ತನ್‌ಝೀಲ್ ಅಹ್ಮದ್ ಭಟ್ 2009 ನವೆಂಬರ್ 20ರಂದು ಲಾಹೋರಿನಲ್ಲಿ ಜನಿಸಿದನು. ವಕ್‌ಫೇ ನೌ ಪದ್ಧತಿಗೆ ಸೇರಿದ್ದನು. ನಮಾಝ್‌ಗೋಸ್ಕರ ಕ್ರಮಬದ್ಧವಾಗಿ ಮಸ್‌ಜಿದ್‌ಗೆ ಹೋಗುತ್ತಿದ್ದನು. ಅವನು ತನ್ನ ಶಾಲೆಯಲ್ಲಿ ಉತ್ತಮ ವಿಧ್ಯಾರ್ಥಿ ಆಗಿದ್ದನು. ಅವನು ಮೃತನಾದ ನಂತರ ಶಾಲೆಯ ಫಲಿತಾಂಶವೂ ಬಂತು ಅವನು 750 ಅಂಕಗಳಲ್ಲಿ 729 ಅಂಕಗಳನ್ನು ಗಳಿಸಿ ತನ್ನ ಕ್ಲಾಸಿನಲ್ಲಿ ಪ್ರಥಮ ಸ್ಥಾನ ಗಳಿಸಿದ್ದನು. ಅಝೀಝುಮ್‌ನ ತಾಯಿ ಹೇಳುತ್ತಾರೆ: ತನ್‌ಝೀಲ್ ನನ್ನ ಮಕ್ಕಳಲ್ಲಿ ಎಲ್ಲರಕ್ಕಿಂತ ಹೆಚ್ಚು ವಿಧೇಯನಾಗಿದ್ದನು. ಏನೆ ಕೆಲಸ ಮಾಡಬೇಕಾದರೆ ನನ್ನಿಂದ ಅಪ್ಪಣೆ ಪಡೆದು ಮಾಡುತ್ತಿದ್ದನು. ನೆರೆಹೊರೆಯವರಾಗಲಿ ಅಥವಾ ಜಮಾಅತ್ತಿನ ಹುದ್ದೆದಾರರಾಗಲಿ ಏನೆ ಕೆಲಸ ಹೇಳಿದರು ಅವನು ಅವರ ಕೆಲಸ ಮಾಡುತ್ತಿದ್ದನು. ಎಂದೂ ಯಾರಿಗೂ ನಿರಾಕರಿಸುತ್ತಿರಲಿಲ್ಲ. ಅಲ್ಲಾಹನು ಅವನಿಗೆ ತನಗೆ ಪ್ರಿಯರಾದವರ ಸಮೀಪ ಸ್ಥಳ ನೀಡಲಿ. ಹತ್ಯೆ ಮಾಡಿದವರಿಗೆ ಶಿಕ್ಷೆ ದೊರಕುವಂತಾಗಲಿ. ತಂದೆ ತಾಯಂದಿರಿಗೆ ಸಹನೆಯನ್ನೂ ಸಮಾಧಾನವನ್ನೂ ನೀಡಲಿ.

ಎರಡನೆಯ ಜನಾಝ ಬ್ರಿಗೇಡಿಯರ್ ಬಶೀರ್ ಅಹ್ಮದ್ ಸಾಹಿಬ್, ರಾವಲ್ಪಿಂಡಿಯ ಮಾಜಿ ಜಿಲ್ಲಾ ಅಮೀರ್ ಅವರದಾಗಿದೆ. ಅವರು ಡಾಕ್ಟರ್ ಮುಹಮ್ಮದ್ ಅಬ್ದುಲ್ಲಾ ಸಾಹಿಬರ ಪುತ್ರರಾಗಿದ್ದರು. 2020 ಫೆಬ್ರವರಿ 16ರಂದು ರಾವಲ್ಪಿಂಡಿಯಲ್ಲಿ 87ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ದಿವಂಗತರು ಮೂಸಿ ಆಗಿದ್ದರು. ಅವರು ಅವರ ಪತ್ನಿಯಲ್ಲದೆ ಇಬ್ಬರು ಪುತ್ರರು ಹಾಗೂ 3 ಪುತ್ರಿಯರನ್ನು ಅಗಲಿ ಹೋದರು.

ಬ್ರಿಗೇಡಿಯರ್ ಬಶೀರ್ ಅಹ್ಮದ್ ಸಾಹೇಬ್ 1931ರಲ್ಲಿ ಗುಜ್ರಾತ್ ಜಿಲ್ಲೆಯ ಒಂದು ಶ್ರೇಷ್ಠ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ಡಾ॥ ಮುಹಮ್ಮದ್ ಅಬ್ದುಲ್ಲಾ ಸಾಹೇಬ್ ಸ್ವತಃ ಬೈಅತ್ ಮಾಡಿ ಜಮಾಅತ್ತಿನಲ್ಲಿ ಸೇರ್ಪಡೆ ಆಗಿದ್ದರು. ಪ್ರಾಥಮಿಕ ವಿದ್ಯಾಭ್ಯಾಸ ಖಾದಿಯಾನಿನಲ್ಲಿ ಪಡೆದರು. ಬ್ರಿಗೇಡಿಯರ್ ಸಾಹೆಬರು 1947ರಲ್ಲಿ ಮೆಟ್ರಿಕ್ ಉತ್ತೀರ್ಣರಾದರು. 1952ರಲ್ಲಿ ಪಾಕಿಸ್ತಾನದ ಮಿಲಿಟರಿ ಅಕಾಡಮಿಯ sixth long course ಪಾಕಿಸ್ತಾನದ ಸೈನ್ಯದಲ್ಲಿ ಕಮೀಷನ್ ಪಡೆದರು. 1982ರಲ್ಲಿ ಸೈನ್ಯದಿಂದ ಬ್ರಿಗೇಡಿಯರ್ ಆಗಿ ನಿವೃತ್ತಿ ಹೊಂದಿದರು. ತದನಂತರ ಒಂದು ಸುದೀರ್ಘ ಕಾಲ ಇಸ್ಲಾಮಬಾದ್‌ನ ಪಾಲಿಸಿ ಇನ್‌ಸ್ಟಿಟ್ಯೂಟ್‌ನ ಮುಖಂಡರಾಗಿ ದೇಶ ಸೇವೆ ಮಾಡಿದರು. ಹೀಗೆ ಅವರು ಸುಮಾರು 66 ವರ್ಷಗಳ ಕಾಲ ದೇಶ ಸೇವೆ ಮಾಡಿದರು.

ಜಮಾಅತ್ತಿನ ಸೇವೆಗಳು ಹೀಗಿವೆ 2012ರಲ್ಲಿ ನಾನು ಅವರನ್ನು ರಾವಲ್‌ಪಿಂಡಿ ಜಮಾಅತ್ತಿನ ಅಮೀರನ್ನಾಗಿ ನೇಮಿಸಿದೆನು. ಹೀಗೆ ಅವರು

9 ಫೆಬ್ರವರಿ 2020ರ ವರೆಗೆ ರಾವಲ್‌ಪಿಂಡಿಯ ಅಮೀರ್ ಆಗಿ ಸೇವೆ ಸಲ್ಲಿಸಿದರು. 1979ರಲ್ಲಿ ಅವರ ವರ್ಗಾವಣೆಯು ರಾವಲ್‌ಪಿಂಡಿಗೆ ಆಯಿತು. 16 ವರ್ಷಗಳ ಕಾಲ ನಾಯಿಬ್ ಅಮೀರ್ ಹಾಗೂ ಸೆಕ್ರೇಟರೀ ತಾಲೀಮ್ ಆಗಿ ಸೇವೆ ಸಲ್ಲಿಸಿದರು. ಫಝ್ಲೆ ಉಮರ್ ಫೌಂಡೇಶನ್‌ನ ಡೈರೆಕ್ಟರ್ ಮತ್ತು ಶೂರ ಕಮೀಟಿಯ ಸದಸ್ಯರನ್ನಾಗಿ ಸೇವೆ ಸಲ್ಲಿಸಿದ್ದಾರೆ. ಬ್ರಿಗೇಡಿಯರ್ ಸಾಹೇಬರು ಬಹಳ ನಿಷ್ಠಾವಂತರಾಗಿದ್ದರು, ಬಹಳ ನಿಷ್ಠೆಯಿಂದ ಸೇವೆಸಲ್ಲಿಸುತ್ತಿದ್ದರು. ಎಲ್ಲರೊಂದಿಗೆ ಬೆರೆಯುವ ಸ್ವಭಾವ ಹೋಂದಿದ್ದರು ಮತ್ತು ಎಲ್ಲರೊಂದಿಗೆ ಪ್ರೀತಿಯಿಂದ ಮತ್ತು ಕರುಣೆ ತೋರುತ್ತಿದ್ದರು. ಧರ್ಮ ಸೇವೆಯ ವಿಷಯವನ್ನು ಬಹಳ ಗಾಂಭೀರ್ಯದಿಂದ ಪಾಲಿಸುತ್ತಿದ್ದರು. ಅವರು ಸ್ವತಃ ಜಮಾಅತ್ತಿನ ಕೆಲಸಗಳು ಬಹಳ ಬೇಗ ಮಾಡುತ್ತಿದ್ದರು ಮತ್ತು ತಮ್ಮ ಗೆಳೆಯರನ್ನು ಸಹ ಹೀಗೆ ಮಾಡಲು ಉಪದೇಶಿಸುತ್ತಿದ್ದರು. ಬಹಳ ಪ್ರಾರ್ಥನೆ ಮಾಡುವವರು, ಆರಾಧಕರು ಮತ್ತು ಖಿಲಾಫತ್‌ನೊಂದಿಗೆ ಪ್ರೀತಿಸುವವರಾಗಿದ್ದರು. ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರೇಮಿ ಆಗಿದ್ದರು ಮತ್ತು ತಾವು ಅಹ್ಮದಿ ಆಗಿದ್ದಕ್ಕೆ ಅಲ್ಲಾಹನ ಕೃತಜ್ಞರಾಗಿದ್ದರು. ಪವಿತ್ರ ಖುರ್‌ಆನ್, ಹದೀಸ್ ಗ್ರಂಥ ಹಾಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಗ್ರಂಥಗಳು ಅವರ ತಲೆದಿಂಬಿನ ಹತ್ತಿರವೇ ಇರುತ್ತಿದ್ದವು. ಅವರ ಅಧ್ಯಾಯನವೂ ಬಹಳ ವಿಶಾಲವಾಗಿತ್ತು. ಬಡವರಿಗೆ ಬಹಳ ವಿಶಾಲ ಹೃದಯದಿಂದ ಹಾಗೂ ರಹಸ್ಯವಾಗಿ ಸಹಾಯ ಮಾಡುತ್ತಿದ್ದರು.

ರಾವಲ್‌ಪಿಂಡಿಯ ಮುರಬ್ಬಿ ಆಗಿರುವ ತಹಿರ್ ಮಹ್ಮೂದ್ ಸಾಹೆಬ್ ಅವರು ಹೇಳುತ್ತಾರೆ: ಅಮಿರ್ ಸಾಹೇಬರು ಬಹಳ ಮೃದು ಸ್ವಭಾವದವರಾಗಿದ್ದರು. ದಯಾಲು, ಕಡಿಮೆ ಮಾತನಾಡುವರು ಹಾಗೂ ಪ್ರಾರ್ಥನೆ ಮಾಡುವವರಾಗಿದ್ದರು. ಜುಮುಅದ ದಿವಸ ಜುಮುಅಕ್ಕಿಂತ ಬಹಳ ಮುಂಚೆಯೇ ಐವಾನೆ ತೌಹೀದ್‌ಗೆ ಅಗಮಿಸಿ ಬಹಳ ವಿನಮ್ರತೆಯಿಂದ ನಫಿಲ್ ನಮಾಝ್ ನಿರ್ವಹಿಸುತ್ತಿದ್ದರು. ಬೇಗ ಬೇಗ ನಮಝ್ ನಿರ್ವಹಿಸುವವರಿಗೆ ಖಾದಿಯಾನಿನ ಸಹಾಬರ ಉದಾಹಣೆಗಳನ್ನು ನೀಡಿ ತಿಳಿ ಮಾತು ಹೇಳುತ್ತಿದ್ದರು. ಸಹನೆಯಿಂದ ನಮಾಝ್ ನಿರ್ವಹಿಸುವವರನ್ನು ಪ್ರೋತ್ಸಾಹಿಸುತ್ತಿದ್ದರು. ದುಆ ಹಾಗೂ ತಸ್‌ಬೀಹ್‌ಯ ಕಡೆ ಗಮನ ಹರಿಸುತ್ತಿದ್ದರು. ಅವರು ಸ್ವತಃ ದುಆ ಮಾಡುವವರು ಹಾಗೂ ಸಹನೆಯಿಂದ ಸುದೀರ್ಘವಾಗಿ ನಮಾಝ್ ನಿರ್ವಹಿಸುವವರಾಗಿದ್ದರು. ಬಡವರಿಗೆ ಸಹಾಯ ಮಾಡುವವರಾಗಿದ್ದರು ಎಂದು ಎಲ್ಲರೂ ಬರೆದಿದ್ದಾರೆ. ಒಂದು ವೇಳೆ ಯಾರಾದರು ಕೃತಜ್ಞನೆ ಅರ್ಪಿಸುತ್ತಿದ್ದರೆ ಅವರನ್ನು ಅದರಿಂದ ತಡೆಯುತ್ತಿದ್ದರು. ದಿವಂಗತರು ಬಹಳ ವಿನಮ್ರ ಸ್ವಭಾವದವರು, ಭಯ ಭಕ್ತಿವುಳ್ಳವರು, ಖಿಲಾಫತ್ತಿನ ನಿಜವಾದ ಸೇವಕರಾಗಿದ್ದರು. ಅಲ್ಲಾಹನು ಮೃತರೊಂದಿಗೆ ರಹಮ್ ಮತ್ತು ಮಗ್‌ಫಿರತ್‌ನೊಂದಿಗೆ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳು ನಿಷ್ಠೆಯೊಂದಿಗೆ ಬೈಅತ್ ಹಕ್ಕುಗಳನ್ನು ಈಡೇರಿಸುವ ಭಾಗ್ಯ ಗಳಿಸುವವರಾಗಲಿ – ಆಮೀನ್.

ಮೂರನೆಯ ಜನಾಝ ಡಾಕ್ಟರ್ ಹಮೀದುದ್ದೀನ್ ಸಾಹಿಬರದು. ಅವರು ಫೈಸಲಾಬಾದಿನ ನಿವಾಸಿಯಾಗಿದ್ದರು. ಫೆಬ್ರವರಿ 29ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ದಿವಂಗತರ ಕುಟುಂಬದಲ್ಲಿ ಅಹ್ಮದಿಯತ್ ಅವರ ತಂದೆ ಮುಹಮ್ಮದ್ ದೀನ್ ಸಾಹೆಬ್ ಮತ್ತು ಅಜ್ಜ ಮುಹ್‌ತರಮ್ ಫತಹ್ ದೀನ್ ಸಾಹೆಬ್ ಆಫ್ ಹರ್‌ಸಿಯಾನ್ ಜಿಲ್ಲೆ ಗುರ್‌ದಾಸ್ಪುರ ಅವರು ಬೈಅತ್‌ನಂದ ಬಂದಿತ್ತು. ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಅವರ ಖಿಲಾಫತ್ ಕಾಲದಲ್ಲಿ ಬೈಅತ್ ಮಾಡಿದ್ದರು. ದಿವಂಗತರು ಖಾದಿಯಾನಿನಲ್ಲಿ ಜನಿಸಿದ್ದರು. ಅವರ ತಾಯಿಯ ಚಿಕ್ಕಪ್ಪ ಹಝ್ರತ್ ಮೌಲಾನ ಮುಹಮ್ಮದ್ ಇಬ್ರಾಹೀಮ್ ಸಾಹೆಬ್ ಸಹಾಬಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಿದ್ದರು. ಅವರು ಕ್ರೈಸ್ತ ಮತದ ಪ್ರಸಿದ್ಧ ವಿದ್ವಾಂಸರಾಗಿದ್ದರು ಮತ್ತು ಒಂದು ಸುದೀರ್ಘ ಕಾಲ ಮದ್‌ರಸ ಅಹ್ಮದಿಯದಲ್ಲಿ ಅಧ್ಯಾಪಕರಾಗಿದ್ದರು. ಹಿಂದುಸ್ತಾನ ವಿಭಜನೆಯ ನಂತರ ದಿವಂಗತರ ಕುಟುಂಬವೂ ಫೈಸಲಬಾದ್‌ಗೆ ಬಂದು ನೆಲೆಸಿದರು. ವೃತ್ತಿಯಿಂದ ಅವರು ಔಷಧಿ ಮಾಡಿ ಕೊಡುವವರಾಗಿದ್ದರು. ಹೀಗೆ ಅವರು ತಮ್ಮ ಪ್ರದೇಶದಲ್ಲಿ ಮಾನವೀಯತೆಯ ಸೇವೆ ಸಲ್ಲಿಸಿದರು. ಅವಶ್ಯಕತೆ ಇರುವವರಿಗೆ ಉಚಿತವಾಗಿ ತಪಾಸಣೆ ನಡೆಸುತ್ತಿದ್ದರು. ಬಹಳ ಸಾಮಾನ್ಯ ಸ್ವಭಾವದವರು, ಭಯಭಕ್ತಿವುಳ್ಳವರು, ಬಾಲ್ಯದಿಂದಲೇ ನವಾಝ್, ಉಪವಾಸ ನಿರ್ವಹಿಸುವವರಾಗಿದ್ದರು. ಜಮಾಅತ್ತಿನ ಅನೇಕ ಹುದ್ದೆಗಳಲ್ಲಿ ಅವರು ಸೇವೆಸಲ್ಲಿಸಿದ್ದಾರೆ. ಅವರ ಓರ್ವ ಪುತ್ರ ಕರೀಮ್ ದೀನ್ ಶಮ್ಸ್ ಸಾಹೆಬ್ ಮುರಬ್ಬಿ ಆಗಿದ್ದಾರೆ ಪ್ರಸ್ತುತಕಾಲದಲ್ಲಿ ಇವರು ತನ್‌ಝಾನಿಯಾದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಅಳಿಯ ಸಹ ಮುರಬ್ಬಿ ಆಗಿದ್ದಾರೆ. ಮತ್ತೋರ್ವ ಅಳಿಯ ಮುಅಲ್ಲಿಮ್ ಆಗಿದ್ದಾರೆ. ಓರ್ವ ಮೊಮ್ಮಗ ಜಮಿಯಾ ಅಹ್ಮದಿಯ ರಬ್ವದಲ್ಲಿ ಶಾಹಿದ್ ದರ್ಜೆಯ ವಿದ್ಯಾರ್ಥಿ ಆಗಿದ್ದಾರೆ. ಅದೇ ರೀತಿ ಇವರ ಅನೇಕ ಮೊಮ್ಮಕ್ಕಳು ವಖ್‌ಫೇ ನೌನಲ್ಲಿದ್ದಾರೆ. ಅಲ್ಲಾಹನು ಮೃತರೊಂದಿಗೆ ರಹಮ್ ಮತ್ತು ಮಗ್‌ಫಿರತ್‌ನೊಂದಿಗೆ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೆ ನಿಷ್ಠೆಯೊಂದಿಗೆ ಬೈಅತ್ ಹಕ್ಕುಗಳನ್ನು ಈಡೇರಿಸುವ ಭಾಗ್ಯ ಗಳಿಸುವವರಾಗಲಿ – ಆಮೀನ್.

ನಾನು ಹೇಳಿದ ಹಾಗೆ ಇವರೆಲ್ಲರ ನಮಾಝ್ ಜನಾಝ ಗಾಯಿಬ್ ನಮಾಝ್ ಜುಮ್ಮದ ನಂತರ ನಿರ್ವಹಿಸುವೆನು.

********************

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

## ಸೂಚನೆ

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.
**email: www.kannadabadar@gmail.com**
**Mob or whatsapp: 8050330779**


**M.Sc Physics, B.Ed ಶಿಕ್ಷಕರು ಬೇಕಾಗಿದ್ದಾರೆ**

ಸದರ್ ಅಂಜುಮನ್ ಅಹ್ಮದಿಯ ಖಾದಿಯಾನ್ ಅಡಿಯಲ್ಲಿ ನಝಾರತ್ ತಾಲೀಮ್‌ನಲ್ಲಿ ಒಂದು ಹುದ್ದೆ ತುಂಬಬೇಕಾಗಿರುವುದು. ಆಸಕ್ತಿವುಳ್ಳ ಅಭ್ಯರ್ಥಿಗಳು ಕೆಳಕಂಡ ವಿವರಗಳೊಂದಿಗೆ ಅರ್ಜಿ ಸಲ್ಲಿಸಬಹುದೆಂದು ತಮ್ಮ ಗಮನಕ್ಕರ ತರಲಾಗುತ್ತದೆ.

**ವಿವರಗಳು (ಶರತ್ತುಗಳು)**

- ಅಭ್ಯರ್ಥಿಯ ಶೈಕ್ಷಣಿಕ ಅರ್ಹತೆಯು UGC ಯಿಂದ ಮಾನ್ಯತೆಪಡೆದ ಯಾವುದೇ ವಿಶ್ವವಿದ್ಯಾಲಯದಿಂದ M.Sc Physics, B.Ed. ಶೇ50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.
- ಯಾವುದೇ Secondary classನಲ್ಲಿ ಕನಿಷ್ಠ 2 ವರ್ಷದವರೆಗೆ Physics ಬೋಧಿಸುವ ಅನುಭವ ಹೊಂದಿರಬೇಕು.
- ಅಭ್ಯರ್ಥಿಯ ವಯಸ್ಸು 22 ರಿಂದ 37 ವರ್ಷ ನಡುವೆ ಆಗಿರಬೇಕು.
- ಕೇಂದ್ರ ಆಯ್ಕೆ ಸಮಿತಿಯಿಂದ ಆಯೋಜಿತ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣ ಅಭ್ಯರ್ಥಿಯನ್ನೇ ಸಂದರ್ಶನಕ್ಕೆ ಕರೆಯಲಾಗುವುದು.
- ಲಿಖಿತ ಮತ್ತು ಮೌಖಿಕ ಸಂದರ್ಶನದಲ್ಲಿ ಉತ್ತೀರ್ಣಗೊಂಡ ಅಭ್ಯರ್ಥಿಯನ್ನು ನೂರ್ ಆಸ್ಪತ್ರೆ ಖಾದಿಯಾನ್ ಜಾರಿಗೊಳಿಸಿದ Medical fitness certificate ಪ್ರಸ್ತುತಪಡಿಸಬೇಕಾಗುವುದು.
- ಸಂದರ್ಶನಕ್ಕೆ ಹಾಜರಾಗುವ ಅಭ್ಯಥಿ ಖಾದಿಯಾನಗೆ ಹೋಗಿ ಬರುವ ಮತ್ತು ವೈದ್ಯಕೀಯ ಎಲ್ಲಾ ಖರ್ಚು ಸ್ವಯಂ ಭರಿಸಬೇಕಾಗುವುದು.
- ಆಯ್ಕೆಗೊಂಡ ನಂತರ ಖಾದಿಯಾನಿನಲ್ಲಿ ವಸತಿ ವ್ಯವಸ್ಥೆಯು ತಾನೇ ನೋಡಿಕೊಳ್ಳಬೇಕಾಗುವುದು.
- ಬದರ್ ವಾರ ಪತ್ರಿಕೆಯಲ್ಲಿ ಪ್ರಕಟಣೆ ನೀಡಿದ ಎರಡು ತಿಂಗಳ ನಂತರ ಪರೀಕ್ಷೆಯ ದಿನಾಂಕ ಸೂಚಿಸಲಾಗುವುದು.
- ಪ್ರಸ್ತುತ ಹುದ್ದೆಗೆ ಬೇಕಾದ ಅರ್ಜಿಯ ನಮೂನೆಗಳು ನಝಾರತ್ ದಿವಾನ್ ಖಾದಿಯಾನ್ ಮೂಲಕ ಪಡೆಯಬಹುದಾಗಿದೆ. ಅರ್ಜಿ ಪೂರ್ಣ ರೀತಿಯಲ್ಲಿ ತುಂಬಿಸಿ ಕೊಟ್ಟ ನಂತರ ಕಯಿದೆ ಅನ್ವಯ ಕ್ರಮಕೈಗೊಳ್ಳಲಾಗುವುದು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:** ನಝಾರತ್ ದಿವಾನ್ ಸದರ್ ಅಂಜುಮನ್ ಅಹ್ಮದಿಯ ಖಾದಿಯಾನ್
E-mail: diwan@qadian.in
01872-501130, 9646351280, 9464066686

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್(ಅ) ರವರ ಬಹುಮಾನದ ಪಂಥಾಹ್ವಾನ"

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

### "ಪಾದ್ರಿ ಇಮಾದುದ್ದೀನ್‌ಗಾಗಿ ಐವತ್ತು ರೂಪಾಯಿಗಳ ಬಹುಮಾನದ ಪಂಥಾಹ್ವಾನ"

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ರವರು ವಿವಿದೆಡೆ ತನ್ನ ಗ್ರಂಥಗಳಲ್ಲಿ ವಿರೋಧಿಗಳಿಗೆ ಬಹುಮಾನ ಹಾಗೂ ಬಹುಮಾನೇತರ ಪಂಥ್ವಾನ ನೀಡಿರುತ್ತಾರೆ. ಅವರ ಅತ್ಯಂತ ವೈಭವಪೂರಿತ ಪಂಥ್ವಾನಗಳನ್ನು ಅಧ್ಯಯನ ಮಾಡಿದವರಿಗೆ ಆಗುವ ಅನುಭವ ವರ್ಣನತೀತವಾಗಿದೆ. ಅವರು ಪಂಥಾಹ್ವಾನ ನೀಡುವ ಉದ್ದೇಶ ಎದುರಾಳಿಗಳ ಕೈಯಲ್ಲಿ ಯಾವ ಅಸ್ತ್ರವು ಇರಬಾರದು ಎನ್ನುವುದಾಗಿತ್ತು. ಮತ್ತು ಇಸ್ಲಾಮಿನ ಸತ್ಯತೆ ಸೂರ್ಯದ ಬೆಳಕಿನಂತೆ ಪ್ರಖರವಾಗಿ ಗೋಚರಿಸುವಂತಾಗಬೇಕು ಎಂದಾಗಿತ್ತು.

ಹಿಂದಿನ ಸಂಚಿಕೆಯಲ್ಲಿ ನಾವು ಬರಾಹೀನ್-ಇ-ಅಹ್ಮದಿಯಾ ಕುರಿತು ಅವರ ಹತ್ತು ಸಾವಿರ ರೂಪಾಯಿಗಳ ಅತ್ಯಂತ ವೈಭವಪೂರಿತ ಘೋಷಣೆಯ (ಪಂಥಾಹ್ವಾನ) ವಿವರ ನೀಡಿದ್ದೆವು. ಇಂದು ನಾವು ಇನ್ನೊಂದು ಬಹುಮಾನದ ಘೋಷಣೆಯ ವಿವರ ನೀಡುವೆವು. ಈ ಘೋಷಣೆ ಸಹ ಅವರು(ಅ) ತನ್ನದೇ ಗ್ರಂಥವಾದ ಅಂದರೆ ಬರಾಹೀನ್-ಇ-ಅಹ್ಮದಿಯಾದ ಪುಟ 434 ರಲ್ಲಿ ಪಾದ್ರಿ ಇಮಾಮುದ್ದೀನ್‌ನಗೆ ಬಿಸ್ಮಿಲ್ಲ ಹಿರ್ರಹ್ಮಾನಿ ರ್ರಹೀಮ್" ಮೇಲೆ ಆಕ್ಷೇಪ ಎತ್ತಿರುವುದಕ್ಕೆ ಉತ್ತರವಾಗಿ ನೀಡಲಾಯಿತು.

ಪಾದ್ರಿ ಇಮಾಮುದ್ದೀನಿನ ಆಕ್ಷೇಪ ಮತ್ತು ಅದರ ಉತ್ತರ ಬರೆಯುವ ಮೊದಲು ಪಾದ್ರಿ ಸಾಹಿಬರ ಸಂಕ್ಷಿಪ್ತ ಪರಿಚಯ ನೀಡುವುದು ಉಚಿತ ಎನಿಸುತ್ತದೆ. ಅವರು 1830 ರಲ್ಲಿ ಜನಿಸಿದರು. 1900 ರಲ್ಲಿ ನಿಧನ ಹೊಂದಿದರು. ಖುರ್‌ಆನ್ ಹದೀಸಿನ ಶಿಕ್ಷಣ ಪಡೆದ ನಂತರ ಮತ್ತು ಸೂಫೀ ಸಜ್ಜನರ ಸಹವಾಸದಿಂದ ಪ್ರಭಾವಿತರಾಗಿ ಅವರಿಂದ ಧರ್ಮ ಬೋಧನೆ ಪಡೆದುಕೊಂಡ ನಂತರ ಸುಮಾರು 36 ವರ್ಷಗಳ ವಯಸ್ಸಿನಲ್ಲಿ 29 ಏಪ್ರಿಲ್ 1866 ರಂದು ಅಮೃತಸರದಲ್ಲಿ ಪಾದ್ರಿ ರಾಬರ್ಟ್ ಕ್ಲಾರ್ಕ್‌ನ ಕೈಯಲ್ಲಿ ಕ್ರೈಸ್ತನಾದರು. ಇಮಾಮುದ್ದೀನ್ ಬರೆಯುತ್ತಾನೆ. "ಮುಕ್ತಿ ಪಡೆಯುವ ಉದ್ದೇಶ ಮಾತ್ರದಿಂದ ಕ್ರೈಸ್ತನಾದೆನು." ಕ್ರೈಸ್ತನಾದ ನಂತರ ಇಸ್ಲಾಮ್ ಧರ್ಮವನ್ನು ವಿರೋಧಿಸುವುದು ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಬೈಯ್ಯುವುದು ಮತ್ತು ಪವಿತ್ರ ಖುರ್‌ಆನನ ಮೇಲೆ ಆಕ್ಷೇಪವೆತ್ತುವುದು ಅವರ ಹವ್ಯಾಸವಾಗಿಬಿಟ್ಟಿತ್ತು. ಇಂತಹದೊಂದು ವ್ಯಕ್ತಿ ಮುಕ್ತಿ ಪಡೆಯಲು ಅರ್ಹನಾಗುವನೇ? ಪಾದ್ರಿ ಇಮಾಮುದ್ದೀನ್ ಅವರ ಕುರಿತು ಈ ಕೆಳಗೆ ನಮೂದಿತ ಅಭಿಪ್ರಾಯಗಳನ್ನು ಪರಿಶೀಲಿಸಿರಿ.

ಒಂದು ಕ್ರೈಸ್ತ ಪತ್ರಿಕೆ **ಶಮ್ಸುಲ್ ಅಖ್‌ಬಾರ್ ಲಖೌನೌ** (ಮುದ್ರಣ ಅಮೇರಿಕನ್ ಮಿಷನ್ ಪ್ರೆಸ್ 15, ಅಕ್ಟೋಬರ್ 1875 ನಂಬರ್ 15, ಸಂಪುಟ 7 ಬಹತಮಾಮ್ ಪಾದ್ರಿ ಕ್ರಿವಾನ್ ಸಾಹಿಬ್ ಪುಟ-8)ನಲ್ಲಿ ಹೀಗೆ ಬರೆದನು:

"ನಿಯಾಝ್ ನಾಮ" ಅದರ ಲೇಖಕರು ಸಫ್ದರ್ ಅಲಿ ಸಾಹಿಬ್ ಬಹಾದುರ್ ಮಸೀಹ್ Extra Assistant commissioner ಜಿಲ್ಲಾ, ಸಾಗರ ಮಲಿಕ್ ಮುತುವಸಿತುದದೀನ್, ಇಮಾದುದ್ದೀನ್‌ನ ಗ್ರಂಥಗಳ ಹಾಗೆ ದ್ವೇಷ ಪೂರಿತವಾಗಿ ಕಾಣುತ್ತಿಲ್ಲ. ಅದರಲ್ಲಿ ಬರಿ ಬೈಗುಳಗಳು ಬರೆಯಲ್ಪಟ್ಟಿವೆ. 1857 ನಂತರ ಅದೇ ರೀತಿಯ ದಂಗೆಯಾಗುವುದಾದರೆ ಇಂತಹ ವ್ಯಕ್ತಿಯ ಅಸಭ್ಯ ಭಾಷೆ ಹಾಗೂ ದುವರ್ತನೆಗಳಿಂದ ಆಗುವ ಸಾಧ್ಯತೆ ಇದೆ. ಅವನಿಗೆ ಹೊರಗೆ 15 ರೂಪಾಯಿಗೂ ಕೇಳುವವರೂ ಇರಲಿಲ್ಲ. ಅಂತಹನಿಗೆ ಮಿಷನ್ ಪ್ರಯಾಣ ಭತ್ತೆ ತಿಂಗಳವಾರು ಸಂಬಳ ಮತ್ತು ವಸತಿಗೋಸ್ಕರ ಅರಮನೆ ಅದರೊಳಗೆ ಬೇಕಾದರೆ ಎಣ್ಣೆ ತೆಗೆಯಲು ಗಾಣವು ಹಾಕಿಕೊಳ್ಳಬಹುದು. ಇಂತಹ ಲಾಲಲಸಿಯ ಬಗ್ಗೆ ಏನು ಹೇಳಬೇಕು. **(ನೂರುಲ್ ಹಖ್ ಭಾಗ-1, ರೂಹಾನಿ ಖಝಾಯೀನ್ ಸಂಪುಟ-8, ಪುಟ-141)**

ಸಫ್ದರ್ ಅಲಿ ಆಗ್ರಾದಲ್ಲಿ ತಂಗಿರುವಾಗ ಇಮಾಮುದ್ದೀನರ ಮಿತ್ರರಾಗಿದ್ದರು. ಅಲ್ಲಿ ಇಮಾಮುದ್ದೀನ್ ತಮ್ಮ ಹಿರಿಯ ಸಹೋದರ ಮೌಲ್ವಿ ಕರೀಮುದ್ದೀನ್‌ರ ಉಸ್ತುವರಿಯಲ್ಲಿ ಶಿಕ್ಷಣ ಪಡೆದಿದ್ದರು. 1857ರ ನಂತರ ಮೌಲ್ವಿ ಕರೀಮುದ್ದೀನ್ ಲಾಹೋರ್‌ಗೆ ಬಂದಿದ್ದರು. ಆಗ ಇಮಾಮುದ್ದೀನ್ ಸಹ ಲಾಹೋರ್‌ಗೆ ಬಂದುಬಿಟ್ಟರು. ಇಲ್ಲಿ ಅವರಿಗೆ ಸಫ್ದರ್ ಅಲಿ ಕ್ರೈಸ್ತನಾದ ಸುದ್ದಿ ಸಿಕ್ಕಿತು. ಅದರ ಕೆಲ ಅವಧಿ ನಂತರ ಇಮಾಮುದ್ದೀನ್ ಸಹ ಕ್ರೈಸ್ತರಾದರು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಬ್ರಿಟಿಷ್ ಇಂಡಿಯಾದಲ್ಲಿ ಈ ಸಮಯ ಹಲವು ಪಾದ್ರಿಗಳ ವೃತ್ತಿಯು ಹಗಲು ರಾತ್ರಿ ನಮ್ಮ ನಬಿ ಮತ್ತು ನಮ್ಮ ನಾಯಕರುಗಳಾದ ಸರ್ವ ಶ್ರೇಷ್ಠ ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಬಯ್ಯುವುದೇ ಆಗಿದೆ. ಆ ಎಲ್ಲ ಬೈಯುವುದರಲ್ಲಿ ಪಾದರಿ ಇಮಾಮುದ್ದೀನ್ ಒಂದು ಹೆಜ್ಜೆ ಮುಂದಿದ್ದಾರೆ. **(ಕಿತಾಬುಲ್ ಬರಿಯ್ಯ, ರೂಹಾನಿ ಕಝಾಯೀನ್ ಸಂಪುಟ-8, ಪುಟ-120)**

ಹಝ್ರತ್ ಮಸೀಹ್ ಮೌಊದ್(ಅ) ಆ ಎಲ್ಲ ಪಾದ್ರಿಗಳಿಗೆ ತನ್ನ ಗ್ರಂಥ ನೂರುಲ್ ಹಖ್‌ನಲ್ಲಿ ಅಮೂಲ್ಯವಾದ ಸಲಹೆಗಳನ್ನು ನೀಡಿದರು:

"ಈ ಹಸಿದ ಆಶ್ರಯರಹಿತ ಜನರು ತಮ್ಮನ್ನು ತಾನು ನೋಡಿಕೊಳ್ಳಲು ಅರ್ಹರಾಗಿರಲಿಲ್ಲ. ಅವರ ಊಟೋಪಚಾರ ನೋಡಿಕೊಳ್ಳುವ ಅರ್ಹತೆ ಮುಸ್ಲಿಮರಿಗೂ ಇರಲಿಲ್ಲ. ಕಾರಣ ಭೌತಿಕ ಐಶ್ವರ್ಯ ಸಂಪತ್ತು ಮತ್ತು ಉತ್ತಮ ಊಟದ ಲಾಲಸೆ ಹೊಂದಿ ಚರ್ಚ್‌ಗಳಲ್ಲಿ ಸೇರಿದ್ದಾರೆ. ಮತ್ತು ತನ್ನನ್ನು ತಾನು ಇಸ್ಲಾಮ್ ದ್ವೇಷಿ ಎಂದು ಸಾಬೀತು ಪಡಿಸಲು ಎಲ್ಲ ಪವಿತ್ರಾತ್ಮಗಳ ಸರದಾರರಾದ ಹಝ್ರತ್ ರಸೂಲುಲ್ಲಾಹ್(ಸ) ರವರ ಮೇಲೆ ತಮ್ಮ ನಾಲಿಗೆಯನ್ನು ಹರಿಯಬಿಟ್ಟಿದ್ದಾರೆ. ಬೈಯ್ಯುತ್ತಿದ್ದಾರೆ. ಅಸಭ್ಯ ಭಾಷೆಯನ್ನು ಬಳಸುತ್ತಿದ್ದಾರೆ. ಹೀಗೆ ನಿರುದ್ಯೋಗಿಗಳಾಗಿ ತಮ್ಮ ಅಭಿಲಾಷೆಗಳನ್ನು ಈಡೇರಿಸಿಕೊಳ್ಳುವ ಮೋಹ ಹೊಂದಿದ್ದಾರೆ. ಅವರ ಹಿರಿಯರು ಇವರನ್ನು ಕೈಬಿಟ್ಟರು. ಇವರ ಅಸಭ್ಯ ಭಾಷೆ ಪಾಪಗಳಿಂದ ತಡೆಯಲು ಯಾವ ವ್ಯವಸ್ಥೆಯು ಮಾಡಲಿಲ್ಲ. ಅವರಿಗೆ ನನ್ನ ಸಲಹೆಗಳೆಂದರೆ, ಅವರಿಗೆ ತಮ್ಮ ಸಮುದಾಯ ಹಾಗೂ ವೃತ್ತಿಯ ಅನುಗುಣವಾಗಿ ಸೇವೆಗಳನ್ನು ಒದಗಿಸಬೇಕಾಗಿದೆ. ಅವರಲ್ಲಿ ಬಾಡಿಗೆದಾರರಾಗಿದ್ದಲ್ಲಿ ಅವರಿಗೆ ಬಾಡಿಗೆಯ ಸಾಮಗ್ರಿಗಳನ್ನು ನೀಡಬೇಕು. ಪಿಂಜಾರರಾಗಿದ್ದಲ್ಲಿ ಅದಕ್ಕನುಗುಣವಾಗಿ ಸಾಮಗ್ರಿ ಒದಗಿಸಬೇಕು. ಕ್ಷೌರಿಕನಾಗಿದ್ದಲ್ಲಿ ಅವನ ಕೈಯಲ್ಲಿ ಉಸ್ತ್ರ ಮತ್ತು ಗಾಣಿಗೆಯಾಗಿದ್ದಲ್ಲಿ ಅವನಿಗೆ ಗಾಣ ಒದಗಿಸಬೇಕು. ಅದರಿಂದ ಅವರು ತಮ್ಮ ತಮ್ಮ ವೃತ್ತಿಯಲ್ಲಿ ತೊಡಗಿಸಿಕೊಳ್ಳುವರು ಆಗ ಮಾತ್ರ ಅವರು ಈ ಅನಾವಶ್ಯಕ ದೂಷಣೆಯ ಕೆಲಸ ಹಾಗೂ ಪಾಪ ಕೃತ್ಯಗಳಿಂದ ಉಳಿಯಬಹುದಾಗಿದೆ." **(ತಾರುಫ್ ಕಿತಾಬ್ ನೂರುಲ್ ಹಖ್, ರೂಹಾನಿ ಖಝಾಯೀನ್ ಸಂಪುಟ-8, ಮೌಲಾನ ಜಲಾಲುದ್ದೀನದ ಶಮ್ಸ್ ಪುಟ-7)**

ಪಾದ್ರಿ ರಾಬರ್ಟ್ ಕ್ಲಾರ್ಕ್‌ನ ಕೈಯ ಮೇಲೆ ಇವರು **ಬಪ್ತಸ್ಮ (ಕ್ರೈಸ್ತಧರ್ಮ)** ಸ್ವೀರಿಸಿದ್ದರು. ಪಾದ್ರಿ ಹೆನ್ರಿ ಮಾರ್ಟಿನ್ ಕ್ಲಾರ್ಕ್ ಅವನ ಪಿತರಾಗಿದ್ದರು. ಅವನು ಪಾದ್ರಿ ಅಬ್ದುಲ್ಲ ಆಥಮ್ ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಮಧ್ಯೆ ಅಮೃತ್ಸರದಲ್ಲಿ ಚರ್ಚಾಕೂಟ ಏರ್ಪಡಿಸಿದ್ದರು. ಆದರೆ ಈ ರಾಬರ್ಟ್ ಕ್ಲಾರ್ಕ್ ಅವನ ಅಸಲು ಪುತ್ರನಾಗಿರಲಿಲ್ಲ. ಬದಲಾಗಿ ದತ್ತು ಪುತ್ರನಾಗಿದ್ದ. ಅವರ ಮಾತಾ ಪಿತರು ಆಫ್‌ಗಾನಿಸ್ತಾನದವರಾಗಿದ್ದರು. ಇಮಾಮುದ್ದೀನ್‌ನ ಪೂರ್ವಜರು ಜಾನ್ಸಿ ನಗರದ ನಿವಾಸಿಗಳಾಗಿದ್ದರು. ಅವರ ತಾತ ಮೌಲ್ವಿ ಮುಹಮ್ಮದ್ ಪಾಝಿಲ್ ಯಾವುದೇ ಒಂದು ಸಮಯದಲ್ಲಿ ಜಾನ್ಸಿ ಬಿಟ್ಟು ಪಾನಿಪತ್ ನಗರಕ್ಕೆ ಆಗಮಿಸಿ ನೆಲೆಸಿದ್ದರು. ಕ್ರೈಸ್ತನಾಗುವ ಮೊದಲು ಇಮಾಮುದ್ದೀನ್ ಒಂದು ಸಮಯದಲ್ಲಿ ಜಮಾ ಮಸೀದಿಯ ಇಮಾಮನಾಗಿದ್ದ. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರ) ಹೇಳುತ್ತಾರೆ. "**ಪಾದ್ರಿ ಇಮಾಮುದ್ದೀನ್ ಸಾಹಿಬ್** ಒಂದು ಸಮಯದಲ್ಲಿ ಅಜ್ಮೀರ್ ಶರೀಫನ ಜಮಾ ಮಸೀದಿಯ ಖತೀಬರಾಗಿದ್ದರು. ಇಸ್ಲಾಮ ಧರ್ಮವನ್ನು ತ್ಯಜಿಸಿ ಕ್ರೈಸ್ತರಾದರು. ಇಸ್ಲಾಮ್ ಧರ್ಮದ ವಿರುದ್ಧ ದ್ವೇಷ ಖಾರ್‍ಯಗಳಲ್ಲಿ ಎಷ್ಟೊಂದು ಮುಂದಾಗಿದ್ದರೆಂದರೆ ಅವರ ಇಡೀ ಜೀವನ ಇಸ್ಲಾಮ್ ವಿರೋಧಕ್ಕೆ ಮುಡಿಪಾಗಿಟ್ಟಿತು. **(ಸವಾನೆ ಫಜ್ಲೆ ಉಮರ್, ಸಂಪುಟ-1, ಪುಟ-11)**

ಈ ಕೆಳಗೆ ನಾವು ಪಾದ್ರಿ ಇಮಾಮುದ್ದೀನಿನ ಆರೋಪ ಮತ್ತು ಅದರ ಉತ್ತರ ಹಝ್ರತ್ ಮಸೀಹ್ ಮೌಊದ್(ಅ) ರವರ ಶಬ್ದಗಳಲ್ಲಿ ಬರೆಯುತ್ತೇವೆ. ಪಾದ್ರಿ ಇಮಾಮುದ್ದೀನ್ ತನ್ನ ಗ್ರಂಥ "ಹಿದಾಯತುಲ್ ಮುಸ್ಲಿಮೀನ್" ನಲ್ಲಿ ಆರೋಪ ಮಾಡಿದನು.

"ಬಿಸ್ಮಿಲ್ಲಾಹ್ ವಚನದಲ್ಲಿ "ಅರ್ರಹಮಾನ್ ನಿರ್ರಹೀಮ್" ಎಂದಿದೆ. ಇದು ಸಾಹಿತ್ಯಕವಾಗಿಲ್ಲ, ಬದಲಾಗಿ ಅರ್ರಹೀಮ್ ಅರ್ರಹ್ಮಾನ್ ಆಗಿದ್ದರೆ ಸರಿಯಾದ ರೀತಿ ಸಾಹಿತ್ಯಾತ್ಮಕವಾಗಿರುತ್ತಿತ್ತು. ಏಕೆಂದರೆ ಅಲ್ಲಾಹನ ಅರ್ರಹ್ಮಾನ್ ಹೆಸರು ಅವನ ರಹಮತ್ ದಯೆಯ ನೆಲೆಯಲ್ಲಿ ಸಾಮಾನ್ಯ ಹಾಗೂ ಸಾರ್ವಜನಿಕ ಪದವಾಗಿದೆ. ಮತ್ತು ಅರ್ರಹೀಮ್ ಪದವು ರಹ್ಮಾನ್ ಅನುಗುಣವಾಗಿ ಮೌಲ್ಯದಲ್ಲಿ ವಿಶೇಷ ಅರ್ಥ ಹೊಂದಿರುತ್ತದೆ. ಸಾಹಿತಿಕ ನೆಲೆಯಲ್ಲಿ ನೋಡುವುದಾದರೆ ಸಾಮಾನ್ಯದಿಂದ ವಿಶೇಷದ ಕಡೆ ಬರಬೇಕೆ ಹೊರತು ವಿಶೇಷದಿಂದ ಸಾಮಾನ್ಯದ ಕಡೆ ಅಲ್ಲ. **(ಬರಾಹೀನ್-ಇ-ಅಹ್ಮದಿಯಾ, ರೂಹಾನಿ ಖಝಾಯೀನ್ ಸಂಪುಟ-1, ಪುಟ-434, ಅಡಿಟಿಪ್ಪಣಿ)**

**ಹಝ್ರತ್ ಮಸೀಹ್ ಮೌಊದ್(ಅ)** ಅದಕ್ಕೆ ಉತ್ತರವಾಗಿ ಹೇಳಿದರು:

ಯಾವ ಸಾಹಿತ್ಯದ ಕುರಿತು ಅರಬರ ಎಲ್ಲ ಮಾತೃ ಭಾಷಿಕರು ಅದರಲ್ಲಿ ಮಹೋನ್ನತರಾದ ಕವಿಗಳು ಇದ್ದರು. ಇಸ್ಲಾಮಿನ ಕಡು ವೈರಿಗಳಾಗಿದ್ದರು.

ಚಕಾರವೆತ್ತಲಿಲ್ಲ. ಅಲ್ಲದೇ ದೊಡ್ಡ ದೊಡ್ಡ ಮತಾಂದರು ಖುರ್‌ಆನಿನ ಮಹೋನ್ನತ ಸಾಹಿತ್ಯವನ್ನು ನೋಡಿ ಆಶ್ಚರ್ಯ ಚಕಿತರಾದರು. ಅವರಲ್ಲಿ ಹಲವರು ವಿದ್ವಾಂಸರು ಭಾಷೆ ಸಂಸ್ಕೃತಿಯ ಪಾಂಡಿತ್ಯ ಹೊಂದಿದವರಾಗಿದ್ದರು. ಅವರು ಸಹ ಖುರ್‌ಆನಿನ ಸಾಹಿತ್ಯವನ್ನು ಮಾನವ ಶಕ್ತಿಯಿಂದ ಮಿಗಿಳಾದುದು ಎಂದು ತಿಳಿದುಕೊಂಡರು. ಮತ್ತು ಇದನ್ನು ಒಂದು ಮಹೋನ್ನತವಾದ ಪವಾಡ ಎಂದು ಪರಿಗಣಿಸಿ ವಿಶ್ವಾಸ ತಂದರು. ಅವರ ಉಲ್ಲೇಖ ಪವಿತ್ರ ಖುರ್‌ಆನನಲ್ಲಿ ಕಾಣಬಹುದಾಗಿದೆ. ಕೆಲವು ಉಗ್ರ ಪಂಥಿಯರು ವಿಶ್ವಾಸ ಹೊಂದಿದ್ದರು. ಖುರ್‌ಆನಿನ ಸಾಹಿತ್ಯ ಕುರಿತು ಬೆರಗಾಗಿ ಹೀಗೆ ಹೇಳಿದರು. ಇದು ಅಪ್ಪಟ ಜಾದೂ ಆಗಿರುತ್ತದೆ. ಇದನ್ನು ಎದುರಿಸಲು ಯಾರಿಂದಲೂ ಸಾಧ್ಯವಿಲ್ಲ. ಇಂತಹದೊಂದು ಗ್ರಂಥದ ಮೇಲೆ ಆರೋಪ ಮಾಡುವ ಜನರು ಅವರಲ್ಲಿ ಒಬ್ಬ ವ್ಯಕ್ತಿ ಅಂತೂ ಎರಡು ಪಂಕ್ತಿ ಅರಬ್ಬಿ ಸಾಹಿತ್ಯದಲ್ಲಿ ಬರೆಯುವ ಸಾಮರ್ಥ್ಯ ಹೊಂದಿರುವುದಿಲ್ಲ. ಯಾವನೋ ಅರಬಿ ಭಾಷಿಕನೊಡನೆ ಮಾತನಾಡುವ ಸಂದರ್ಭ ಒದಗಿ ಬಂದರೆ ಎಡರು ತೊಡರು ಹೊಂದಾಣಿಕೆ ರಹಿತ ಶಬ್ದಗಳನ್ನು ಸಹ ಉಚ್ಚರಿಸುವ ಯೋಗ್ಯತೆ ಹೊಂದಿರುವುದಿಲ್ಲ. ಯಾರಿಗಾದರೂ ಅನುಮಾನವಿದ್ದರೆ ಅವನನು ಪರೀಕ್ಷಿಸಿ ನೋಡಿರಿ. ವಿವೇಕವಂತರು ಯೋಚಿಸಿ ನೋಡಬಹುದು. ಇಂತಹದೊಂದು ಗ್ರಂಥ ಅದು ಸ್ವಭಾಷಿಕರಲ್ಲಿಯೇ ಅವತರಿಸಿದೆ. ಅದರ ಮೌಲ್ಯ ಮಹಾನತೆಯ ಕುರಿತು ಎಲ್ಲಾ ಸ್ವಭಾಷಿಕರು. ಅಲ್ಲದೇ ಮಹೋನ್ನತ ಕವಿಗಳು ಸಹ ಸಹಮತ ಹೊಂದಿದ್ದಾರೆ. ಇಂತಹದೊಂದು ಪರಿಮಾಣಿತ ಗ್ರಂಥವನ್ನು ಯಾವನೋ ಒಬ್ಬ ಬುದ್ಧಿಹೀನ, ಪರಭಾಷಿಕನು ನಿರಾಕರಿಸಿದರೆ ಒಪ್ಪತಕ್ಕದ್ದೆ? ಅವನ ಆರೋಪ ನಿಲ್ಲುವಂತಹದ್ದೆ? ಬದಲಾಗಿ ಇಂತಹ ಜನರು ತನ್ನ ಹದ್ದು ಮೀರಿ ಮಾತನಾಡುವವರಾಗಿರುತ್ತಾರೆ. ಹೀಗೆ ಮಾಡಿ ಸ್ವಯಂ ತನ್ನ ಅಜ್ಞಾನತೆ ಪ್ರದರ್ಶಿಸುತ್ತಾರೆ. ಅವರು ಇದನ್ನು ಕೂಡ ಅರಿಯುವುದಿಲ್ಲ. ಸ್ವಭಾಷಿಕರ ಸಾಕ್ಷ್ಯದ ಮುಂದೆ ದೊಡ್ಡ ದೊಡ್ಡ ಪ್ರಖ್ಯಾಥ ಕವಿಗಳ ಸಾಕ್ಷ್ಯದ ಮುಂದೆ ಯಾವನೋ ಒಬ್ಬ ವಿರೋಧಿ ಆರೋಪ ಮಾಡಿದರೆ ವಾಸ್ತವದಲ್ಲಿ ಅದು ಸ್ವಯಂ ಅವನ ಅಜ್ಞಾನತೆ ಮತ್ತು ದ್ವೇಷಭಾವ ಪ್ರಕಟಿಸಿದಂತಾಗುತ್ತಿದೆ. ಹಾಗಾದರೆ ಇಮಾಮುದ್ದೀನ್ ಪಾದ್ರಿ ಯಾವುದೇ ಅರಬಿಯ ಎದುರಿನಲ್ಲಿ ಯಾವುದೇ ಧಾರ್ಮಿಕ ವಿಷಯದಲ್ಲಾಗಲಿ ಅಥವಾ ಲೌಕಿಕ ವಿಷಯದಲ್ಲಾಗಲಿ ಒಂದೆರಡು ತಾಸು ಮಾತ್ರ ನಮ್ಮೊಡನೆ ಮಾತನಾಡಿ ತೋರಿಸಲಿ. ಜನರು ತಿಳಿಯಬಹುದು. ಇವನಿಗೆ ತಕ್ಕಮಟ್ಟದ್ದಾದರೂ ಅರಬಿ ಮಾತನಾಡಬಲ್ಲನೋ, ಇಲ್ಲವೋ ಎಂಬುದು. ಏಕೆಂದರೆ ನಾವು ಚೆನ್ನಾಗಿ ಬಲ್ಲೆವು ಅವನಿಂದ ಖಂಡಿತ ಸಾಧ್ಯವಿಲ್ಲ. ನಮಗೆ ಚೆನ್ನಾಗಿ ಗೊತ್ತಿದೆ. ಅವನನ್ನು ಒಬ್ಬ ಅರಬಿ ಭಾಷಿಕನೊಡನೆ ಮಾತನಾಡಲು ಬಿಟ್ಟರೆ ಅವನು ಅವರ ಎದುರಿನಲ್ಲಿ ಒಂದು ಸಣ್ಣದಾದ ಕಥೆಯನ್ನು ಸಹ ಅರಬಿಯಲ್ಲಿ ಹೇಳಲು ಶಕ್ತನಲ್ಲ. ನಿಮಗೆ ಅನುಮಾನವೇನಾದರೂ ಇದ್ದರೆ ಈ ರೀತಿ ಪರೀಕ್ಷಿಸಿ ನೋಡಿ. ನಾವು ಜವಾಬ್ದಾರಿ ಹೊರುತ್ತೇವೆ. ಪಾದ್ರಿ ಇಮಾಮುದ್ದೀನ್ ಬಯಸುವುದಾದರೆ ನಾವು ಅರಬಿ ಬಲ್ಲವನಿಗೆ ಕರೆಯಿಸಿ ಸಮಯ ನಿಗಧಿ ಮಾಡಿ ಸಭೆ ಏರ್ಪಡಿಸುವೆ. ಅದರಲ್ಲಿ ಕೆಲವರು ಅರ್ಹ ಹಿಂದುಗಳಿರಲಿ, ಕೆಲವು ಮುಸ್ಲಿಂ ಮೌಲ್ವಿಗಳಿರಲಿ, ಬೇಕಾದರೆ ಇಮಾಮುದ್ದೀನ್ ತಮ್ಮ ಕೆಲವು ಕ್ರೈಸ್ತ ಸಹೋದರರನ್ನು ಸಹ ಕರೆ ತರಲಿ. ಎಲ್ಲರ ಸಮಕ್ಷಮ ಇಮಾಮುದ್ದೀನ್ ಸಾಹಿಬ್ ಯಾವುದಾದರೊಂದು ಕಥೆ ಆ ಸಮಯ ಹೇಳಲಿ. ಅರಬಿ ಭಾಷೆಯಲ್ಲಿ ವಿವರಿಸಲಿ. ಮತ್ತು ಅದೇ ಕಥೆಯನ್ನು ಅರಬಿ ಭಾಷಿಕರು ಅವರ ಎದುರಿನಲ್ಲಿ ಹೇಳಲಿ. ಆಗ ಇಮಾಮುದ್ದೀನ್ ಸರಿಯಾದ ರೀತಿಯಲ್ಲಿ ಅರಬಿಯರ ಹಾಗೆ ತಮ್ಮ ವಿಚಾರವನ್ನು ಮಂಡಿಸಿದ್ದಾರೆ ಎಂದಾರೆ ನಾವು ಅವರ ಪಾಂಡಿತ್ಯ ಸ್ವೀಕರಿಸುವೆವು. ಅಲ್ಲದೇ **ಅದೇ ಸಮಯ 50 ರೂಪಾಯಿ ನಗದು ಬಹುಮಾನ ರೂಪದಲ್ಲಿ ನೀಡುವೆವು**. ಆದರೆ ಆ ಸಮಯ ಇಮಾಮುದ್ದೀನ್ ಸಾಹಿಬ್ ಸಾಹಿತ್ಯಕ ರೂಪದಲ್ಲಿ ಅರಬಿಯಲ್ಲಿ ಭಾಷಣ ಮಾಡದೆ ಎಡರು ತೊಡರು ತಪ್ಪುಗಳನ್ನು ಎಸಗಿ ದುರ್ನಾತ ಎಬ್ಬಿಸಿದರೆ ಅಥವಾ ತನ್ನ ಅಸಮರ್ಥತೆ ಹಾಗೂ ಅಜ್ಞಾನತೆಯಿಂದ ಹೆದರಿ ಯಾವುದೇ ಪತ್ರಿಕೆಯ ಮುಖಾಂತರ ಇಂತಹದೊಂದು ಸ್ಪರ್ಧೆಗೆ ನಾನು ತಯಾರಾಗಿದ್ದೇನೆಂದು ಪ್ರಕಟಿಸಿದ್ದರೆ **"ಲಾನತಲ್ಲಾಹಿ ಅಲಲ್‌ಕಾಝಿಬೀನ್"** ಸುಳ್ಳುಗಾರರ ಮೇಲೆ ಅಲ್ಲಾಹನ ಶಾಪವಿರಲಿ" ಅನ್ನದೇ ಇನ್ನೇನೆನ್ನಬೇಕು. ಮತ್ತು ಇದು ನೆನಪಿಡಿರಿ. ಇಮಾಮುದ್ದೀನ್ ಸಾಹಿಬ್ ಇನ್ನೊಂದು ಜನ್ಮ ಪಡೆದರೂ ಯಾವನೋ ಅರಬಿ ಭಾಷಿಕರೊಡನೆ ಸ್ಪರ್ಧಿಸಲು ಯೊಗ್ಯರಲ್ಲ ಮತ್ತು ಯಾವ ರೀತಿ ಅವರು ಅರಬಿಯರ ಮುಂದೆ ಏನೂ ಹೇಳಲು ಶಕ್ತರಲ್ಲ. ಮೂಕರಾಗಲು ತಯಾರಾಗಿದ್ದಾರೆ. ಹೀಗಿರುವಾಗ ಆ ಕ್ರೈಸ್ತರ ಮತ್ತು ಆರ್ಯರ ವಿವೇಕದ ಮೇಲೆ ವಿಷಾಧವಿದೆ. ಸಾವಿರಾರು ಸಲದ ವಿಷಾಧವಿದೆ ಮತ್ತು ಸಾವಿರಾರು ಶಾಪವಿದೆ. ಅಂತಹ ಅವಿವೇಕಿಯ ಗ್ರಂಥದ ಮೇಲೆ ಭರವಸೆ ಹೊಂದಿ ಅದ್ವಿತೀಯ ಗ್ರಂಥವಾದ ಪವಿತ್ರ ಖುರ್‌ಆನ್ ಉತ್ತಮೋತ್ತಮ ಸಾಹಿತ್ಯ ಒಳಗೊಂಡ ಗ್ರಂಥದ ಮೇಲೆ ಆರೋಪ ಮಾಡುತ್ತಾರೆ. ಅದು ಅರಬರ ಸರದಾರರ ಮೇಲೆ ಅವತರಿಸಿತು. ಅರಬಿಯರೆಲ್ಲರೂ ಅದರ ಉತ್ತಮ ಸಾಹಿತ್ಯದ ಕುರಿತು ಉತ್ತಮ ಎಂದರು. ಆದರೆ ಅವತರಿಕೆಯಿಂದ **ಸಬ್‌ಅ ಮುಅಲ್ಲಖ** ಮೆಕ್ಕಾದ ಬಾಗಿಲಿನಂದ ಇಳಿಸಲ್ಪಟ್ಟಿತು. ಆ ಸಂಬಂಧಿತ ಕವಿಗಳಲ್ಲಿ ಜೀವಂತರಾಗಿದ್ದ ಮಹೋನ್ನತ ಕವಿಯು ತಡಮಾಡದೇ ಆ ಗ್ರಂಥದ ಮೆಲೆ ವಿಶ್ವಾಸ ಹೊಂದಿದರು. **(ಬರಾಹೀನ್-ಅಹ್ಮದಿಯಾ, ರೂಹಾನಿ ಖಝಾಯೀನ್, ಸಂಪುಟ-1, ಪಟು-434, ಅಡಿಟಿಪ್ಪಣಿ 11)**

**ಹಝ್‌ರತ್ ಮಸೀಹ್ ಮೌಊದ್**(ಅ) ತನ್ನ ಗ್ರಂಥ "ಹುಜ್ಜತುಲ್ ಇಸ್ಲಾಮ್" ನಲ್ಲಿ ಕ್ರೈಸ್ತರಿಗೆ ವಿಶೇಷವಾಗಿ ಪಾದ್ರಿಯರನ್ನು ಅತ್ಯಂತ ಗೌರವಯುತವಾಗಿ ಪಂಥ್ವಾನ (challenge) ನೀಡಿದರು. ಅವರು(ಅ) ಹೇಳಿದರು. ಇಸ್ಲಾಮಿನ ಪ್ರಕಾರ ಮತ್ತು ಖುರ್‌ಆನಿನ ಪ್ರಕಾರ ಹೇಗೆ ಮುಹಮ್ಮದ್ ಮುಸ್ತಫಾ(ಸ) ರವರ ಕಾಲದಲ್ಲಿ ಇತ್ತೋ ಈಗಲೂ ಅದೇ ರೀತಿ ಇದೆ. ನಾವು ಇದನ್ನು ತೋರಿಸಲು ತಯಾರಾಗಿದ್ದೇವೆ. ಅವರು(ಅ) ಮುಬಾಹಿಲಗೋಸ್ಕರ ಕರೆದರು. ಅವರು(ಅ) ಪಾದ್ರಿ ಇಮಾಮುದ್ದೀನ್‌ರನ್ನು ಸಹ ಹೆಸರಿಸಿ ಕರೆದಿದ್ದರು. ಮುಕ್ತಿ ಬಯಸುವವರಿಗೆ ಈ ಆಹ್ವಾನ ಸ್ವೀಕರಿಸಬೇಕಾಗಿತ್ತು. ಹಝ್‌ರತ್ ಮಸೀಹ್ ಮೌಊದ್(ಅ) ಬರೆದರು: ಈ ಮಾತನ್ನು ನಾನು ಸ್ಪಷ್ಟಪಡಿಸಿ ಹೇಳುತ್ತೇನೆ. ಈ ವಿನೀತನ ಎದುರಿನಲ್ಲಿ ಬರುವವರು ತಮ್ಮಲ್ಲಿಯ ಸಜ್ಜನ ವ್ಯಕ್ತಿಗಳಾಗಿರಬೇಕು. ಆದರ್ಶ ಬ್ರಿಟೀಷ್ ಪಾದ್ರಿಗಳಾಗಿರಬೇಕು. (ಇದೀಗ ಬಸ್ತತ್ಮ ಹೊಂದಿ ಪಾದ್ರಿಗಳಾದವರು ಇರಕೂಡದು). ಏಕೆಂದರೆ ಈ ಸ್ಪರ್ಧೆ ಮತ್ತು ಚರ್ಚೆಯ ಉದ್ದೇಶವು ಸಾರ್ವಜನಕರ ಮೇಲೆ ಪ್ರಭಾವ ಬೀರುವುದಾಗಿದೆ. ಅದು ಆಗ ಮಾತ್ರ ಸಫಲತೆ ಹೊಂದಲು ಸಾಧ್ಯ. ಸ್ಪರ್ಧಿಗಳಲ್ಲಿ ತಮ್ಮ ತಮ್ಮ ಸಮುದಾಯದ ವಿಶಿಷ್ಠ ವ್ಯಕ್ತಿಗಳಾಗಿರಬೇಕು. ತಾರ್ಕಿಕವಾಗಿ ಬೇಕಾದರೆ ನೀವು ಈ ಸ್ಪರ್ಧೆಯಲ್ಲಿ ಪಾದ್ರಿ ಇಮಾಮುದ್ದೀನ್ ಸಾಹಿಬ್ ಅಥವಾ ಪಾದ್ರಿ ಠಾಕೂರ್‌ದಾಸ್ ಸಾಹಿಬ್ ಅಥವಾ ಹಾಜರಿರಬಹುದು." **(ಹುಜ್ಜತುಲ್ ಇಸ್ಲಾಮ್ ರೂಹಾನಿ. ಖಝಾಯಿನ್, ಸಂಪುಟ-6, ಪುಟ-63)**

**ಮುನಾಝಿರ(ವಾದಪ್ರತಿವಾದ,ಚರ್ಚೆ) ಜಂಗ್-ಇ-ಮುಖದ್ದಸ್**‌ನಲ್ಲಿ ಆಗ ಕ್ರೈಸ್ತರ ಸೋಲಿನ ಕಹಿಯನ್ನು ಮರೆಮಾಚಲು ಪಾದ್ರಿ ಇಮಾಮುದ್ದೀನ್ **"ನೌಝೀನುಲ್ ಅಖ್ವಾಲ್"** ಎಂಬ ಗ್ರಂಥ ಬರೆದನು. ಅದರಲ್ಲಿ ಅವನು ಪವಿತ್ರ ಖುರ್‌ಆನಿನ ಸಾಹಿತ್ಯದ ಮೇಲೆ ಆರೋಪಗಳನ್ನು ಹಚ್ಚಿದನು ಮತ್ತು ಹಝ್‌ರತ್ ರಸೂಲುಲ್ಲಾಹ್(ಸ) ರವರ ವ್ಯಕ್ತಿತ್ವದ ಮೇಲೆ ನಾಚಿಕೆಗೇಡಿತನ ಅಕ್ರಮಣ ಎಸಗಿದನು. ಹಝ್‌ರತ್ ಮಸೀಹ್ ಮೌಊದ್(ಅ) ಅದಕ್ಕೆ **ಉತ್ತರವಾಗಿ "ನೂರುಲ್-ಹಖ್ ಭಾಗವಾ"** ಗ್ರಂಥ ಅರಬಿಯಲ್ಲಿ ರಚಿಸಿದರು. ಇಮಾಮುದ್ದೀನ್ ಮತ್ತು ಇತರ ಪಾದ್ರಿಗಳನ್ನು ಅದೇ ರೀತಿಯ ಸಾಹಿತ್ಯ ಪೂರ್ಣ ಗ್ರಂಥ ಅರೇಬಿಯಲ್ಲಿ ಪ್ರಕಟಿಸಲು ಮತ್ತು ಐದು ಸಾವಿರ ರೂಪಾಯಿ ಬಹುಮಾನ ಪಡೆಯಲು ಆಹ್ವಾನಿಸಿದರು. ಅವರು ಹೇಳಿದರು. ಅವರು ಪ್ರಕಟಿಸದಿದ್ದರೆ ಅಥವಾ ಸ್ಪರ್ಧಿಸಲು ಹಿಂದೇಟು ಹಾಕಿದರೆ ಮತ್ತು ಹಝ್‌ರತ್ ರಸೂಲುಲ್ಲಾಹ್(ಸ) ಹಾಗೂ ಪವಿತ್ರ ಖುರ್‌ಆನಿನ ಅಪಮಾನ ಮಾಡುವುದರಿಂದ ದೂರ ಇರದಿದ್ದರೆ ಅವರ ಮೇಲೆ ಸಾವಿರ ಸಾವಿರ ಶಾಪವಿರಲಿ, ವಿರೋಧಿಗಳಿಂದ ಯಾವುದೆ ಉತ್ತರ ಬರದಿದ್ಧಾಗ ಮತ್ತು ಸ್ಪರ್ಧೆಯಿಂದ ಪಲಾಯನ ಮಾಡಿದಾಗ ಹಝ್‌ರತ್ ಮಸೀಹ್ ಮೌಊದ್(ಅ) ಪಾದ್ರಿ ಇಮಾಮುದ್ದೀನ್ ಕುರಿತು **ಹೇಳಿದರು**.

**"ನೂರುಲ್ ಹಖ್"** ಗ್ರಂಥದ ಉತ್ತರ ನೀಡದ ನಿಮಿತ್ತ ಪಾದ್ರಿ ಇಮಾಮುದ್ದೀನ್‌ನ ಕೊರಳಲ್ಲಿ ಸಾವಿರ ಶಾಪದ ಪಟ್ಟು ಉಳಿದು ಕೊಂಡಿದೆ. ಅವನ ಎಲ್ಲ ಸಹೋದರರಿಗೂ ಅದರ ಭಾಗ್ಯ ಲಭಿಸಿದೆ." **(ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಯೀನ್ ಸಂಪುಟ-9, ಪುಟ-60)**

ಇದರ ಹೆಚ್ಚಿನ ವಿವರಣೆ ಇನ್‌ಶಾಅಲ್ಲಾಹ್ ಸಂದರ್ಭ ಒದಗಿ ಬಂದಾಗ ನೀಡುವೆವು.

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

**ಖಾದಿಯಾನ್ ದಾರುಲ್ ಆಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು**

ಸಯ್ಯದುನಾ ಹಝ್‌ರತ್ ಅಮೀರುಲ್ ಮೂಮಿನೀನ್ ಅಯ್ಯದಾಹುಲ್ಲಾಹು ತಆಲ ಬಿನಸ್ರಿಹಿಲ್ ಆಝೀಝ್‌ರವರು ಭಾರತದ ಜಮಾಅತಿನ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯ್ಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) ಅಕ್ಟೋಬರ್ 16, 17 ಮತ್ತು 18, 2020 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಜಮಾಅತಿನ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ. **(ಸಂಪಾದಕರು)**

ಕೇಟಾಕೊಂಬಿನ ಪ್ರಾರಂಭ ಎರಡನೇ ಶತಮಾನದಲ್ಲ ಆಗಿದೆ. ಅದು ರೋಮಿನಲ್ಲಿ ಸ್ಥಾಪಿತವಾಗಿದೆ. ಅದರಲ್ಲಿ ದೌರ್ಜನ್ಯಕ್ಕೆ ಒಳಗಾದ ಕ್ರೈಸ್ತರು ಒಟ್ಟುಗೊಂಡು ಆರಾಧನೆ ಮಾಡುತ್ತಿದ್ದರು. ಮತ್ತು ತಮ್ಮ ಶವಗಳನ್ನು ಇಲ್ಲೇ ಹೂಳಿರುತ್ತಿದ್ದರು. ಈ ಕ್ರೈಸ್ತರ ವಿವರಣೆಯು ಸೂರಃ ಅಲ್ ಕಹಫ್ ವಚನ 10 ರಲ್ಲಿ **"ಗುಹೆದಾರರು"** ಎಂದು ಕರೆಯಲಾಗಿದೆ. ಆದ್ದರಿಂದ ಅಲ್ಲಾಹನು ನುಡಿದನು. **ಅಮ್ ಹಸಿಬ್‌ತ ಅನ್ನ ಅಸ್ಹಾಬುಲ್ ಕಹಫೆ ವರ್‌ರಖೀಮ್. ಕಾನೂ ಮಿನ್ ಆಯಾತಿನಾ ಅಜಬ** (ಅಲ್‌ಕಹಫ್) ಗುಹಾವಾಸಿಗಳು ಮತ್ತು ಶಿಲಾಲೇಖನಗಳ ಜನರು ತಮ್ಮ ದೃಷ್ಟಾಂತಗಳಲ್ಲಿ ಒಂದು ಅದ್ಭುತವೆಂದು ನೀನು ಭಾವಿಸುತ್ತೀಯೋ?

ಅದಾಗ್ಯೂ ಪ್ಯಾರಿಸಿನ ಈ ಗುಹಾಂತರುಗಳಿಗೆ ಧರ್ಮದಿಂದ ಯಾವ ಸಂಬಂಧವೂ ಇಲ್ಲ. ಈ ಹೆಸರು ರೋಮಿನ ಕೇಟಾಕೊಂಬಿನ ನಿಮಿತ್ತ 1786 ರಲ್ಲಿ ಹೆಸರಿಸಲಾಯಿತು. ವಾಸ್ತವವಾಗಿ 45 ಮಿಲಿಯನ್ ವರ್ಷಗಳ ಮೊದಲು ಪ್ಯಾರಿಸ್ ಮತ್ತು ಅದರ ಅಕ್ಕಪಕ್ಕದಲ್ಲಿ ನೀರೇ ನೀರಾಗಿತ್ತು. ಆ ಕಾರಣದಿಂದ Limesstone ನ ಖಜಾನೆಗಳಾದವು. ಸಮುದ್ರದ ನೀರು ಸೆಟೆದ ನಂತರ ಜನರು ಈ ಗುಹೆಗಳಲ್ಲಿ ವಾಸಿಸಲು ಪ್ರಾರಂಭಿಸಿದರು. ಮತ್ತೆ ಜನರ ಈ ಗುಹೆಗಳಿಂದ ಹೊರ ಬಂದು ಇಲ್ಲಿ ನಗರವನ್ನು ರಚಿಸಲು ಪ್ರಾರಂಭಿಸಿದರು.

ಕಟ್ಟಡ ನಿರ್ಮಾಣದ ಕಾಲದಲ್ಲಿ ಪ್ಯಾರಿಸಿನ ಜನರು ಈ ಗುಹೆಗಳಿಂದ Limestone ತೆಗೆದರು. ಈ ಕಲ್ಲುಗಳು ಕಟ್ಟಡ ನಿರ್ಮಾಣ ಮಾಡಲು ಮತ್ತು ಕೋಟೆ ನಿರ್ಮಿಸಲು ಉಪಯೋಗಿಸ ತೊಡಗಿದರು. ಪ್ಯಾರಿಸಿನ ಚರ್ಚ್ ಮತ್ತು ಸುಪ್ರಸಿದ್ಧ museum (ವಸ್ತು ಪ್ರದರ್ಶನ) ಹಾಗೂ course ಇದರ ಉದಾಹರಣೆಗಳಾಗಿವೆ. ನಿಧಾನವಾಗಿ ಪ್ಯಾರಿಸ್ ಒಂದು ನಗರವಾಯಿತು. ಮತ್ತು ಜನರು ಇಲ್ಲಿ ವಾಸಿಸತೊಡಗಿದರು. ಸಮಯ ಕಳೆದಂತೆ ಮರಣ ಹೊಂದುವವರ ಸಂಖ್ಯೆ ಹೆಚ್ಚಾಯಿತು. ಮತ್ತು ಗೋರಿಗಳು ಕಟ್ಟಲು ಸ್ಥಳಾವಕಾಶ ಕಡಿಮೆಯಾಯಿತು. 18ನೇ ಶತಮಾನದ ಪ್ಯಾರಿಸಿನ ಸ್ಮಶಾನಗಳು ನಿರಿನಿಂದ ತುಂಬತೊಡಗಿದವು. ಶವಗಳ ಎಲುಬುಗಳ ನೀರಿನಲ್ಲಿ ತೇಲಲು ತೊಡಗಿತು. ಅದರಿಂದ ರೋಗಗಳು ಹಬ್ಬಲು ಕಾರಣವಾಯಿತು. ಆದ್ದರಿಂದ ಅಲ್ಲಿಯ ಸರಕಾರವು ತಮ್ಮ ವಿಶೇಷ ಅಧಿಕಾರಗಳನ್ನು ಬಳಸಿ ಇವೆಲ್ಲ ಎಲುಬುಗಳನ್ನು ಸಂಗ್ರಹಿಸಿ ಗುಹಾಂತರಗಳಲ್ಲಿ ದಫನ್ ಮಾಡಲಾಯಿತು ಹೀಗೆ 1786 ರಿಂದ ಗೋರಿಗಳನ್ನು ಗುಹಾಂತರಗಳಲ್ಲಿ ಕಟ್ಟಲು ಪ್ರಾರಂಭಿಸಿದರು. ಅಂದರೆ ಪ್ಯಾರಿಸಸಿನ ಪ್ರತಿ ಸ್ಮಶಾನದಿಂದ ಅಸ್ತಿಪಂಜರಗಳನ್ನು ತೆಗೆದು ಗುಹಾಂತರಗಳಲ್ಲಿ ವರ್ಗಾಯಿಸಿದರು.

20ನೇ ಶತಮಾನದ ಪ್ರಾರಂಭದಲ್ಲಿ ಈ ಗುಹೆಗಳನ್ನು ಪ್ರವಾಸಿಗರಿಗಾಗಿ ತೆರೆದರು. ಸ್ಥಳೀಯ ಮಾರ್ಗದರ್ಶಕರು (Guide) ಜನರನ್ನು ಈ ಗುಹೆಗಳಿಗೆ ಕರೆದುಕೊಂಡು ಹೋಗಿ ಎಲುಬುಗಳ ರಾಶೀಯನ್ನು ತೋರಿಸುತ್ತಾರೆ. ಈ ಗುಹೆಯು 200 ಕಿ.ಮೀ ನಷ್ಟು ಉದ್ದವಾಗಿದೆ. ಕೇವಲ 2 ಕಿ.ಮೀನಷ್ಟು ದೂರ ಪ್ರವಾಸಿಗರಿಗಾಗಿ ತೆರೆಯಲಾಗಿದೆ. ನೀವು 131 ಮೆಟ್ಟಿಲುಗಳನ್ನು ಇಳಿದು ಗುಹೆಗಳ ಒಳಗೆ ಪ್ರವೇಶ ಮಾಡುವಿರಿ ಮತ್ತು ಅಲ್ಲಿಂದ ಎಲುಬುಗಳ ಹಾಗೂ ಬುರುಡೆಗಳ ರಾಶಿಯನ್ನು ಜೋಡಿಸಿಟ್ಟ ಜಾಗಕ್ಕೆ ತಲುಪುವಿರಿ. ಅದರ ಗೋಡೆಗಳು ಎಲುಬುಗಳಿಂದ ನಿರ್ಮಿಸಲಾಗಿದೆ. ಅದರ ತಾಪಮಾನ 14 ಡಿಗ್ರಿ ಇರುತ್ತದೆ. ಸುಮಾರು 6 ಮಿಲಿಯನ್ ಪ್ಯಾರಿಸಿನ ನಗರಗಳ ಅಸ್ತಿ ಪಂಜರಗಳು ಅದರಲ್ಲಿ ಅಡಗಿವೆ. ಅಲ್ಲಿಂದ ಹೊರಗೆ ಬರಲು 112 ಮೆಟ್ಟಿಲುಗಳು ಏರಬೇಕಾಗುತ್ತದೆ. ಈ ಗುಹೆಗಳ ಒಳಗೆ ಜೀವನದ ಅತ್ಯಂತ ವಾಸ್ತವರೂಪ ಫ್ರಾನ್ಸ್‌ನ ಒಂದು ಕವನ ಪಂಕ್ತಿಯಲ್ಲಿ ಬರೆಯಲಾಗಿದೆ. ಅದರ ಅನುವಾದ ಹೀಗಿದೆ.

ಎಲ್ಲರೂ ಜನ್ಮ ಪಡೆಯುತ್ತಾರೆ. ಇರುತ್ತಾರೆ ಮತ್ತು ತೀರಿ ಹೋಗುತ್ತಾರೆ. ತನ್ನ ವಿಧಿ ತಿಳಿಯದೇ ಸಮುದ್ರದ ಅಲೆಗಳನ್ನು ನೀರು ಎಳೆದುಕೊಂಡು ಹೋದ ಹಾಗೆ, ಎಲೆಗಳಿಗೆ ಗಾಳಿ ಹಾರಿಸಿಕೊಂಡು ಹೋಗುವ ಹಾಗೆ, ಮತ್ತೆ ಒಂದು ರಾತ್ರಿ ಮಾನವನ ಜೀವನವು ಅಂತ್ಯಗೊಳ್ಳುತ್ತದೆ. ಅನಂತರ ಈ **"ವಖ್ಫೆ ನೌ ಗುಂಪು"** ಶೀರ್ಷಿಕೆಯಿಂದ ಉರ್ದು ಭಾಷೆಯಲ್ಲಿ ಒಂದು ಕವನ ಪ್ರಸ್ತುಪಡಿಸಿದರು.

ಅನಂತರ ಹುಜೂರ್[ಅಬಿಅ] ವಾಖಿಫಾತೆ ನೌ ಅವರಿಗೆ ಪ್ರಶ್ನೆಗಳನ್ನು ಕೇಳುವ ಅನುಮತಿ ನೀಡಿದರು.

ಓರ್ವ ವಾಖಿಫ ನೌ ಪ್ರಶ್ನೆ ಮಾಡಿದರು: Mix culture ನಲ್ಲಿ ವಿವಾಹವಾಗುವ ಕುರಿತು ಹುಜೂರ್[ಅಬಿಅ] ರವರ ಅಭಿಪ್ರಾಯವೇನು? ಆಗ ಹುಜೂರ್ ಉತ್ತರಿಸಿದರು: ಅಹ್ಮದಿಯರ ವಿವಾಹಗಳು ಅಹ್ಮದಿಯರಲ್ಲಿಯೇ ಆಗಬೇಕು. ಬೇರೆ ಇರುವ ಪ್ರಶ್ನೆ ಅಂದರೆ ಬೇರೆ ಸಮುದಾಯಗಳಿವೆ. ಯೂರೋಪಿನಲ್ಲಿ ಇದ್ದಾರೆ. ಆಫ್ರಿಕನ್‌ನಲ್ಲಿ ಇದ್ದಾರೆ. ಅಮೇರಿಕದಲ್ಲಿದ್ದಾರೆ. ಏಷಿಯನ್‌ನಲ್ಲಿ ಇದ್ದಾರೆ. ಪ್ಯಾರಿಸ್‌ನಲ್ಲಿ ಇದ್ದಾರೆ. ಪಾಕಿಸ್ತಾನದಲ್ಲಿದದಾರೆ. ಇವರು ಪರಸ್ಪರ ಮಾಡಿಕೊಳ್ಳಬಹುದು ಅಥವಾ ಇಲ್ಲ? ಒಳ್ಳೆಯ ಸಂಬಂಧವಿದ್ದರೆ, ಅಹ್ಮದಿಯಾಗಿದ್ದರೆ, ಒಳ್ಳೆಯ ಸಂಬಂಧವಿದ್ದರೆ ಮಾಡಿಕೊಳ್ಳಬಹುದು. ಒಳ್ಳೆಯ ವಿಷವಾಗಿದೆ. ಹಝುರತ್ ಮುಸ್ಲಿಹ್ ಮೌಊದ್[ರ] ಒಂದೆಡೆ ಹೀಗೆ ಬರೆದರು. ಅರೆಬಿ ಮುಸಲ್ಮಾನರು ಭಾರತಕ್ಕೆ ಬಂದಿದ್ದರು. ಆಗ ಅವರು ಆ ಕಾಲದಲ್ಲಿ ಸ್ಥಳೀಯ ಜನರೊಂದಿಗೆ ಅಲ್ಲಿ Mix ನೆಲೆಯಲ್ಲಿ ವಿವಾಹವಾಗಿದ್ದರೆ ಆ ಸಮಯ ಎಷ್ಟು ಮುಸಲ್‌ಮಾನರಿದ್ದಾರೋ ಈಗ ಅದಕ್ಕಿಂತ ಹೆಚ್ಚಾಗುತ್ತಿದ್ದರು. ಅಲ್ಲದೇ ಈಗಿನ ಬಹು ದೊಡ್ಡ ಹಿಂದುಗಳ ಕ್ಷೇತ್ರಗಳು ಮುಸ್ಲಿಮರದ್ದಾಗಿರುತ್ತಿತ್ತು. ಅದರೆ ಈಗ ಜನರು ಲೌಕಿಕ ಆಸಕ್ತಿಯುಳ್ಳವರಾಗಿದ್ದರಿಂದ ಧರ್ಮದ ಸುಳಿವು ಸಹ ದೊರೆಯುವುದಿಲ್ಲ. ಆದ್ದರಿಂದ culture ನಿಸ್ಸಂಶಯವಾಗಿಯೂ ಬೇರೆಯಾಗಿದ್ದರೂ ಧರ್ಮ ಒಂದಾಗಿದ್ದರೆ, ಅಹ್ಮದಿ ಮುಸ್ಲಮಾನನಾಗಿದ್ದರೆ ಒಳ್ಳೆಯ ಸಂಬಂಧ ದೊರೆಯಬಹುದಾದರೆ ದುಆದೊಂದಿಗೆ ಮದುವೆ ಮಾಡಿಕೊಳ್ಳಬಹುದಾಗಿದೆ. ಪರವಾಗಿಲ್ಲ ಒಳ್ಳೆಯ ಸಂಬಂಧವಾಗಿದ್ದರೆ ಸಾಕು. ಅಹ್ಮದಿ ಮುಸಲ್ಮಾನನಾಗಿರಬೇಕು, ಒಳ್ಳೆಯದಾಗುತ್ತದೆ.

ಹುಜೂರ್[ಅಬಿಅ] ಕೇಳಿದ ಪ್ರಶ್ನೆಗೆ ಉತ್ತರವಾಗಿ ವಾಖಿಫ ನೌ ಹೇಳಿದರು. ನಾನು mathimetics ನಲ್ಲಿ ಮಾಸ್ಟರ್ ಡಿಗ್ರಿ ಮಾಡುತ್ತಿದ್ದೇನೆ.

ಓರ್ವ ಬಾಲಕಿಯು ಕೇಳಿದಳು ಹುಜೂರ್[ಅಬಿಅ] ಅಡುಗೆ ಕೋಣೆಯಲ್ಲಿ ಆಪಾಜಾನ್ ಅವರಿಗೆ ಸಹಕರಿಸುತ್ತೀರಾ? ಆಗ ಹುಜೂರ್[ಅಬಿಅ] ಹೇಳಿದರು. ಅವರಿಗೆ ಸಹಕರಿಸುವ ಅಗತ್ಯ ಬಿದ್ದರೆ ಸಹಕರಿಸುತ್ತೇನೆ. ನನ್ನ ಭಾವನೆಯಲ್ಲಿ ಅನಾರೋಗ್ಯ ಕಾರಣ ಬಿಟ್ಟರೆ ಎಂದೂ ಅವರಿಗೆ ಸಹಕರಿಸುವ ಅಗತ್ಯವೇ ಬೀಳುವುದಿಲ್ಲ. ಪ್ಲೇಟ್ ಎತ್ತುವುದು. ಚಮಚ ಎತ್ತುವುದು ಇಷ್ಟು ಬಿಟ್ಟರೆ ಯಾವ ಕೆಲಸವಿರುತ್ತದೆ. ಹೌದು ನಾವು ಘಾನದಲ್ಲಿದ್ದಾಗ ಪರಸ್ಪರ ಸಹಕರಿಸುತ್ತಿದ್ದೆವು. ಆ ಸಮಯ ಗ್ಯಾಸ್ (ಎಲ್.ಪಿ.ಜಿ) ಇರುತ್ತಿರಲಿಲ್ಲ. ನೀರೂ ಇರುತ್ತಿರಲಿಲ್ಲ. ನೀರು ಸಹ ತಂದು ಕೊಡುತ್ತಿದ್ದೆ. ಒಲೆಗಳಲ್ಲಿ Kerosene ಸಹ ತುಂಬಿ ಕೊಡುತ್ತಿದ್ದೆ. ಲ್ಯಾಂಪ್ ಉರಿಸುತ್ತಿದ್ದೆ. ಎಲ್ಲವೂ ಮಾಡುತ್ತಿದ್ದೆ.

**(ಮುಂದುವರಿಯುವುದು)**

### ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರಿಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು."

(ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್–ವ–ಇರ್‌ಶಾದ್ (ಮುರ್‌ಕಝಿಯಾ, ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 09 April 2020 Issue No. 13

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 12ರ ವರದಿಯ ಉಳಿದ ಭಾಗ)**

ಹಝ್ರತ್ ಅಖ್‌ದಸ್ ಮಸೀಹೆ ಮೌಊದ್(ಅ) ರವರ ಅಧ್ಯಾಪನೆಗಳು:

"ಈ ವಿಷಯ ಯಾವುದೇ ಚರ್ಚೆಯಿಲ್ಲದೇ ಸ್ವೀಕರಿಸಿಲು ಯೋಗ್ಯವಿದೆ. ಅವನು ಸತ್ಯವಂತನು ಮತ್ತು ಪರಿಪೂರ್ಣ ಶಕ್ತಿಯುಳ್ಳ ದೇವನು. ಅವನ ಮೇಲೆ ವಿಶ್ವಾಸ ತರುವುದು. ಪ್ರತಿಯೊಬ್ಬ ದಾಸನ ಕರ್ತವ್ಯವಾಗಿದೆ. ಅವನು ಸರ್ವಲೋಕಗಳ ಪರಿಪಾಲಕನಾಗಿದ್ದಾನೆ. ಅವನ ಪರಿಪಾಲಕತನ ಯಾವುದೇ ಒಂದು ಸಮುದಾಯಕ್ಕೆ ಸೀಮಿತವಲ್ಲ. ಅಲ್ಲದೇ ಯಾವುದೇ ವಿಶೇಷ ಕಾಲಕ್ಕೆ ಸೀಮಿತವಲ್ಲ. ಅಂತೆಯೇ ಯಾವುದೇ ರಾಷ್ಟ್ರಕ್ಕೆ ಸೀಮಿತವಲ್ಲ. ಬದಲಿಗೆ ಅದು ಎಲ್ಲಾ ಸಮುದಾಯಗಳ ಪರಿಪಾಲಕನಾಗಿದ್ದಾನೆ ಮತ್ತು ಸರ್ವಕಾಲಿಕನಾಗಿದ್ದಾನೆ. ಸರ್ವಸ್ವಗಳ ಪರಿಪಾಲಕನಾಗಿದ್ದಾನೆ. ಎಲ್ಲಾ ದೇಶಗಳ ಅವನೇ ಪರಿಪಾಲಕನಾಗಿದ್ದಾನೆ. ಅವನು ಎಲ್ಲಾ ಅನುಗ್ರಹಗಳ ಮೂಲವಾಗಿದ್ದಾನೆ. ಪ್ರತಿಯೊಂದು ದೈಹಿಕ ಹಾಗೂ ಆಧ್ಯಾತ್ಮಿಕ ಶಕ್ತಿ ಅವನದೇ ಆಗಿದೆ. ಅವನಿಂದಲೇ ಎಲ್ಲ ಸೃಷ್ಟಿ ಬೆಳವಣಿಗೆ ಹೊಂದುತ್ತಿದೆ. ಪ್ರತಿಯೊಬ್ಬನಿಗೆ ಅವನೇ ಆಶ್ರಯದಾತನಾಗಿದ್ದಾನೆ.

ಅಲ್ಲಾಹನ ಔದಾರ್ಯ ಸರ್ವವ್ಯಾಪ್ತಿಯಾಗಿದೆ. ಅವನು ಸರ್ವ ಸಮುದಾಯಗಳ, ಸರ್ವ ದೇಶಗಳ ಮತ್ತು ಸರ್ವ ಕಾಲಗಳ ಮೇಲೆ ಹತೋಟಿಯುಳ್ಳವನಾಗಿದ್ದಾನೆ. ಇದು ಯಾವ ಸಮುದಾಯಕ್ಕು ದೂರು ಕೊಡಲಿಕ್ಕೆ ಆಸ್ಪದವಾಗಬಾರದು ಎಂಬ ಕಾರಣದಿಂದಾಗಿದೆ. ಅಲ್ಲಾಹನು ಆಯಾಯ ಸಮುದಾಯುಗಳನ್ನು ಅನುಗ್ರಹಿಸಿದ್ದಾನೆ. ನಮಗೆ ಅನುಗ್ರಹಿಸಲಿಲ್ಲ ಎಂದಾಗಬಾರದು. ಅಥವಾ ಎಲ್ಲಾ ಸಮುದಾಯಕ್ಕೆ ಗ್ರಂಥ ದೊರೆತು ಮಾರ್ಗದರ್ಶಿ ದೊರೆತಿದೆ. ನಮಗೆ ದೊರೆಯಲಿಲ್ಲ ಎಂದಾಗಬಾರದು. ಅಥವಾ ಆಯಾ ಕಾಲದಲ್ಲಿ ಅವನು ತಮ್ಮ ವಹ್ಯಿ, ದಿವ್ಯವಾಣಿ ಮತ್ತು ಪವಾಡಗಳನ್ನು ದಯಪಾಲಿಸಿದನು. ಆದರೆ ನಮ್ಮ ಕಾಲದಲ್ಲಿ ಎಕೆ ಸುಮ್ಮನಾದ ಎಂದು ಹೇಳುವಂತಾಗಬಾರದು. ಆದ್ದರಿಂದ ಅವನ ಈ ಸರ್ವೇ ಸಾಮಾನ್ಯ ಔದಾರ್ಯವು ಇವೆಲ್ಲಾ ಆಕ್ಷೇಪಗಳನ್ನು ದೂರ ಮಾಡಿದನು. ಎಂತಹ ಒಂದು ನೀತಿ ಔದಾರ್ಯ ತೋರಿಸಿದ್ದಾನೆಂದರೆ ಯಾವ ಸಮುಧಾಯವನ್ನು ಲೌಕಿಕವಾಗಿಯೂ ಆಧ್ಯಾತ್ಮಿಕವಾಗಿಯೂ ವಂಚಿಸಲಿಲ್ಲ. ಯಾವ ಕಾಲವನ್ನೂ ದೌರ್ಭಾಗ್ಯಕ್ಕೆ ಗುರಿ ಮಾಡಲಿಲ್ಲ.

ಅನಂತರ ಅಝೀಝೂ ರಗ್ಬೀಬ ಝುಹೂರ್ ಅಝೀಝಾ ಅದೀಬ ಅಲೀಮ್ ಮತ್ತು ಅಝೀಝಾ ನಾಯಿಲಾ ಅಕ್ರಮ್ ಹಝ್ರತ್ ಮುಸ್ಲಿಹ್ ಮೌಊದ್(ರ) ರವರು 1924 ರಂದು ಮಾಡಿದ ಫ್ರಾನ್ಸ್ ಪ್ರವಾಸದ ಕುರಿತ ಒಂದು ಉಡುಗೊರೆ ನೀಡಿದರು. ಹಝ್ರತ್ ಮಸೀಹ್ ಮೌಊದ್(ಅ) ರವರು ತನ್ನ ಒಂದು ಪುಸ್ತಕ "ನುಝೂಲ್ ಮಸೀಹ್" ನಲ್ಲಿ ಇದರ ಕುರಿತು ವಿವರಣೆ ನಿಡಿದ್ದಾರೆ. ಕೆಲವು ಹದೀಸ್‌ಗಳಲ್ಲಿ ಪ್ರಸ್ತಾಪಿಸಿದಂತೆ ಮಸೀಹ್ ಮೌಊದ್(ಅ) ದಮಿಷ್ಕಸ್‌ನ ಪೂರ್ವ ದೆಸೆಯ ಒಂದು ಬಿಳಿ ಮೀನಾರಿನ ಬಳಿ ಅವತರಿಸುವರು. ಅದರ ವಾಸ್ತವ ತಾತ್ಪರ್ಯವು ಅವರು ದಮಿಶ್ಕ್‌ನ ಪೂರ್ವ ದೇಶಗಳಲ್ಲಿ ಬಲವಾದ ಮತ್ತು ಸಂಶಯ ರಹಿತ ಪುರಾವೆಗಳೊಂದಿಗೆ ಪ್ರಕಟಗೊಳ್ಳುವುದೆಂದು ಆಗಿದೆ. ಆದರೂ ಒಂದು ಬಾಹ್ಯ ಅರ್ಥಧಲ್ಲಿ ನಮಗೂ ಅಲ್ಲಿ ಹೋಗುವ ಸಂದರ್ಭ ಒದಗಿ ಬರಬಹುದೆಂದೂ ಆಗಿದೆ. ಅಥವಾ ಖಲ್ಫಾಗಳಲ್ಲಿ (ಖಲೀಫರುಗಳಲ್ಲಿ) ಯಾವ ಖಲೀಫರು ದಮಿಶ್ಕ ಪ್ರವಾಸ ಕೈಗೊಳ್ಳಬಹುದೆಂದೂ ಆಗಿರುತ್ತದೆ. ಆದ್ದರಿಂದ ಅಲ್ಲಾಹನು ಅವರ ಈ ಸಾಂದರ್ಭಿಕ ಉಲ್ಲೇಖವನ್ನು ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯ ರವರ ಮೂಲಕ ಪೂರ್ಣಗೊಳಿಸಿದನು. ಸೀರಿಯಾ ಮತ್ತು ಇತರ ದೇಶಗಳಿಂದ ಪ್ರಯಾಣಿಸುತ್ತ ಫ್ರಾನ್ಸ್‌ಗೂ ಆಗಮಿಸಿದರು.

ಅಹ್ಮದಿಯಾ ಜಮಾಅತಿನ ವತಿಯಿಂದ ಫ್ರಾನ್ಸ್‌ನಲ್ಲಿ ನೇರವಾದ ಪ್ರಚಾರದ ಪ್ರಾರಂಭವು 1924 ರಲ್ಲಾಯಿತು. ಆಗ ಹಝ್ರತ್ ಮುಸ್ಲಿಹ್ ಮೌಊದ್(ರ) ತಮ್ಮ ಖುದ್ದಾಮರ ಜೊತೆಯಲ್ಲಿ ವೆಂಬ್ಲೆ ಅಧಿವೇಶನದಲ್ಲಿ ಭಾಗವಹಿಸಿ ಮಸ್ಜಿದ್ ಫಝುಲ್ ಲಂಡನ್ನಿನ ಅಡಿಪಾಯ ಹಾಕಿದರು. ನಂತರ 26 ಅಕ್ಟೋಬರ್‌ನಂದ 31 ಅಕ್ಟೋಬರ್ 1924 ರವರೆಗೆ ಫ್ರಾನ್ಸ್‌ನ ರಾಜಧಾನಿ ಪ್ಯಾರಿಸ್‌ಗೆ ಆಗಮಿಸಿದರು. ಹುಝೂರ್(ರ) ಹಝುರತ್ ಸಾಹಿಬ್ಜಾದ ಮಿರ್ಝ ಶರೀಫ್ ಅಹ್ಮದ್(ರ), ಹಝ್ರತ್ ಹಾಫಿಝ್ ರೋಷನ್ ಅಲಿ ಸಾಹಿಬ್(ರ), ಹಝ್ರತ್ ಚೌಧರಿ ಸರ್ ಝುಫರುಲ್ಲಾಹ್ ಸಾಹಿಬ್(ರ), ಹಝ್ರತ್ ಮೌಲ್ವಿ ಅಬ್ದುರ್ ರಹೀಮ್ ಸಾಹಿಬ್(ರ) 18 ಖುದ್ದಾಮರೂ ಆಗಮಿಸಿದ್ದರು.

ತಮ್ಮ ಪ್ರವಾಸದ ಉದ್ದೇಶ ವಿವರಿಸುತ್ತಾ ಅವರು ಒಂದು ವಾರ್ತಾ ಸಂಸ್ಥೆಯ ಪ್ರತಿನಿಧಿಯೊಡನೆ ಹೇಳಿದ್ದರು. ನಾನು ಯೂರೋಪಿನ ಪ್ರವಾಸ ಹೊರಡಲು ಕಾರಣವೇನೆಂದರೆ ಇಲ್ಲಿಯ ಧಾರ್ಮಿಕ ಸ್ಥಿತಿಯನ್ನು ಕಣ್ಣಾರೆ ಕಾಣಬೇಕು. ಅದರಿಂದ ನನಗೆ ಈ ದೇಶಗಳಲ್ಲಿ ಇಸ್ಲಾಮಿನ ಪ್ರಚಾರಕ್ಕಾಗಿ ಒಂದು ಶಾಶ್ವತವಾದ ಯೋಜನೆ ತಯಾರಿಸಲು ಸಹಾಯಕವಾಗಬಹುದು. ಮತ್ತೊಂದು ನನ್ನ ಉದ್ದೇಶವೆಂದರೆ ಲೋಕದಲ್ಲಿ ನಾನು ಮೈತ್ರೀಯ ಧ್ವಜವನ್ನು ಹಾರಿಸಬಯಸುತ್ತೇನೆ. ಅದಕ್ಕಾಗಿ ಪೂರ್ವ ಮತ್ತು ಪಶ್ಚಿಮವನ್ನು ಕೂಡಿಸಲು ಯಾವ ಕಾರ್ಯಗಳು ಸಹಾಯಕವಾಗಬಹುದೆಂದು ಆಗಿರುತ್ತದೆ. (ಅಲ್-ಫಝುಲ್ 29 ನವೆಂಬರ್ 1924)

ಪ್ರಚಾರ ಕಾರ್ಯಗಳಲ್ಲದೆ ಹಝ್ರತ್ ಮುಸ್ಲಿಹ್ ಮೌಊದ್(ರ) ಪ್ಯಾರಿಸಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಒಂದು ಮಸೀದಿಯನ್ನು ವೀಕ್ಷಿಸಿದರು. ಮತ್ತು ಅವರೊಡನೆ ಸೇರಿ ಒಂದು ದೀರ್ಘವಾದ ಪ್ರಾರ್ಥನೆ (ದುಆ) ನೆರವೇರಿಸಿ ಕೊಟ್ಟರು. ಅಲ್ಲದೇ ಅವರು ಇಲ್ಲಿ ದುಆ ಮಾಡುವವರಲ್ಲಿ ಪ್ರಥಮರಾಗಿ ಹೇಳಿದರು. ನಾನು ಇಲ್ಲಿ ದುಆ ಮಾಡಿದ್ದೇನೆಂದರೆ "ಓ ಅಲ್ಲಾಹನೆ ಈ ಮಸೀದಿ ನಮ್ಮದಾಗಲಿ, ನಮಗೆ ಈ ಮೂಲಕ ನಿನ್ನ ಧರ್ಮದ ಪ್ರಚಾರ ಮಾಡುವ ಭಾಗ್ಯ ದೊರೆಯುವಂತಾಗಲಿ" (ಅಲ್‌ಫಜಲ್ 18 ಡಿಸೆಂಬರ್ 1924)

ಹಝ್ರತ್ ಖಲಿಫತುಲ್ ಮಸೀಹ್ ದ್ವಿತೀಯರು ಫ್ರಾನ್ಸ್‌ನಲ್ಲಿ ಬಿತ್ತಿದ ಈ ಆಶಾವಾದದ ಬೀಜವು ಇದೀಗ ಅಲ್ಲಾಹನ ಅನುಗ್ರಹದಿಂದ ಫ್ರಾನ್ಸ್‌ನಲ್ಲಿ ಬೆಳೆಯತೊಡಗಿದೆ. ಅಲ್‌ಹಮ್ದುಲಿಲ್ಲಾಹಿ ಅಲಾ ಝಾಲಿಕ್.

ಅನಂತರ ಅಝೀಝಾ ಖೋಲ ಅಸದ್ ಮತ್ತು ಅಝೀಝಾ ಬುಶ್ರಾ ಲತೀಫ್ ಪ್ಯಾರಿಸಿನ (the catacombs of paris) ಅಂದರೆ ಪ್ಯಾರಿಸಿನ ಗುಹೆಗಳ ಕೆಳ ಅಂತಸ್ತಿನ ಕುರಿತು Presentation ನೀಡಿದರು. catacom ಉನಾನಿ ಪದ "ಕಾತಾ" ದಿಂದ ಉದ್ಭವಿಸಿದೆ. ಅದರ ಅರ್ಥ ಕೆಳಗೆ ಮತ್ತು ಲಾಎತೆನೀ "ಕೋಬಾಯೆ" ದಿಂದ ಬಂದಿದೆ. ಅದರ ಅರ್ಥ "ಬಯಲು ಜಾಗ" ಕೇಟಾಕೊಂಬ್ ಭೂಮಿಯ ಒಳಭಾಗದಲ್ಲಿ ಇಂತಹದೊಂದು ಬಯಲು ಜಾಗವನ್ನು ಹೇಳುತ್ತಾರೆ. ಅಲ್ಲಿ ಎಲುಬಿನ ಅಸ್ತಿಪಂಜರವನ್ನು ಇಡಲು ಉಪಯೋಗಿಸುತ್ತಾರೆ.

*(ಉಳಿದ ವರದಿ ಪುಟ ಸಂಖೆ 09 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800-103-2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.